# ನಮ್ಮ ಜನ
# NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 01 ಸಂಚಿಕೆ – 258 | Volume - 01 Issue - 258
ಶೀರ್ಷಿಕೆ ಕೋಡ್: ಕೆಎಆರ್ ಕೆಎಎನ್ 28269 | Title- Code: KARKAN 28269
ಚಿತ್ರದುರ್ಗ | Chitradurga
ದಿನಾಂಕ: 03–05–2024 ಶುಕ್ರವಾರ | Date: 03-05-2024 Friday
ಪುಟ: 4 | Page: 4
ಬೆಲೆ : ರೂ.2–00 | Price: Rs. 2-00



**ಒಳಪುಟದ ಸುದ್ದಿಗಳು**

ಚಿತ್ರದುರ್ಗ ಅಬಕಾರಿ ಡಿಸಿ ವಿರುದ್ಧದ ಎಸಿಬಿ ಪ್ರಕರಣ ವಜಾ ಮಾಡಿದ ಸುಪ್ರೀಂ ಕೋರ್ಟ್ 2

ಬಿಸಿಲಿನ ದಗೆ; ನೀರಿನ ಡ್ರಮ್‌ಗಳ ಮೊರೆ ಹೋಗುತ್ತಿರುವ ಜನ 3

ಆದರ್ಶಪ್ರಾಯ ಛತ್ರಪತಿ ಶಿವಾಜಿ ಮಹಾರಾಜ್ 4



ಸುದ್ದಿ, ಜಾಹಿರಾತಿಗೆ 9686622252


## ಶುಭ ನುಡಿ

ಬಟ್ಟೆ ನೋಡಿ ಗೆಳೆತನ ಮಾಡಬೇಡ,
ಗುಣ ನೋಡಿ ಗೆಳೆತನ ಮಾಡು ,
ಯಾಕೆಂದರೆ ಬಟ್ಟೆ ಹರಿದು ಹೋಗುವ
ತನಕ ಮಾತ್ರ ಇರುತ್ತದೆ, ಗುಣ
ಸಾಯುವವರೆಗೂ ಇರುತ್ತದೆ !!

» ಶುಭೋದಯ

## ಫಾಸ್ಟ್ ನ್ಯೂಸ್

### ದ್ವಿತೀಯ ಪಿಯು ಪರೀಕ್ಷೆ-2: ಇಂಗ್ಲಿಷ್ ವಿಷಯಕ್ಕೆ 190 ವಿದ್ಯಾರ್ಥಿಗಳ ಗೈರು

» ಚಿತ್ರದುರ್ಗ



ಮೇ 02 ರಂದು ನಡೆದ ದ್ವಿತೀಯ ಪಿಯುಸಿ ಪರೀಕ್ಷೆ–2ರಲ್ಲಿ ಇಂಗ್ಲೀಷ್ ಭಾಷಾ ಪರೀಕ್ಷೆಗೆ 190 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಇಂಗ್ಲೀಷ್ ಭಾಷಾ ವಿಷಯಕ್ಕೆ 1656 ವಿದ್ಯಾರ್ಥಿಗಳು ನೊಂದಣಿಯಾಗಿದ್ದು, 1466 ವಿದ್ಯಾರ್ಥಿಗಳು ಹಾಜರಾಗಿ, 190 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಜಿಲ್ಲೆಯ 09 ಕೇಂದ್ರಗಳಲ್ಲಿ ಪರೀಕ್ಷೆ ನಡೆದಿದ್ದು, ಯಾವುದೇ ಡಿಬಾರ್ ಪ್ರಕರಣ ಇರುವುದಿಲ್ಲ. ಮೇ 03ರಂದು ರಾಜ್ಯಶಾಸ್ತ್ರ ಮತ್ತು ಸಂಖ್ಯಾಶಾಸ್ತ್ರ ವಿಷಯದ ಪರೀಕ್ಷೆ ನಡೆಯಲಿದೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಅಧಿಕಾರಿಗಳಿಗೆ ಸೂಚನೆ

# ನೀರಿನ ಸಮಸ್ಯೆ: ಜವಾಬ್ದಾರಿಯಿಂದ ನಿರ್ವಹಿಸಿ

» ಚಿತ್ರದುರ್ಗ



ಜಿಲ್ಲೆಯಲ್ಲಿ ದಿನೇ ದಿನೇ ಬಿಸಿಲ ಧಗೆ ಹೆಚ್ಚಾಗುತ್ತಿದ್ದು, ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕಾಗಿ ಅಧಿಕಾರಿಗಳು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು. ಕುಡಿಯುವ ನೀರಿನ ಸಮಸ್ಯೆ ಕಂಡುಬಂದ ತಕ್ಷಣ ಸಮಸ್ಯೆ ಬಗೆಹರಿಸಲು ಅಗತ್ಯ ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಜಿಲ್ಲೆಯ ಬರಪರಿಸ್ಥಿತಿ ಹಾಗೂ ಕುಡಿಯುವ ನೀರಿನ ಪರಿಸ್ಥಿತಿಯ ನಿರ್ವಹಣೆಯ ಕುರಿತು ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರಿರುವ ಗ್ರಾಮಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಖುದ್ದಾಗಿ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಕುಡಿಯುವ ನೀರಿಗೆ ಸಂಬಂಧಪಟ್ಟಂತೆ ತಾಲ್ಲೂಕು ಮಟ್ಟ ಹಾಗೂ ಹೋಬಳಿ ಹಂತದವರೆಗೂ ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಗಿದ್ದು, ಗ್ರಾಮೀಣ ಕುಡಿಯುವ ನೀರು ನೈರ್ಮಲ್ಯ ಇಲಾಖೆಯೊಂದಿಗೆ ಸಂಬಂಧಪಟ್ಟ ತಹಶೀಲ್ದಾರ್ ಹಾಗೂ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿರುವ ಗ್ರಾಮಗಳ ನಿಖರವಾದ ವರದಿಯನ್ನು ಸಲ್ಲಿಸಬೇಕು ಎಂದು ತಾಕೀತು ಮಾಡಿದರು.

ಚಿತ್ರದುರ್ಗ ತಾಲ್ಲೂಕು ನೋಡಲ್ ಅಧಿಕಾರಿ ಹಾಗೂ ಕೃಷಿ ಇಲಾಖೆ ಜಂಟಿ ನಿರ್ದೇಶಕ ಮಂಜುನಾಥ್ ಮಾತನಾಡಿ, ಕುಡಿಯುವ ನೀರಿನ ಸಮಸ್ಯೆಗೆ ಸಂಬಂಧಪಟ್ಟಂತೆ ಹೋಬಳಿ ಮಟ್ಟದ ನೋಡಲ್ ಅಧಿಕಾರಿ ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಂದ ಮಾಹಿತಿ ಪಡೆಯಲಾಗಿದ್ದು, ಚಿತ್ರದುರ್ಗ ತಾಲ್ಲೂಕಿನ ಚನ್ನಯ್ಯನಹಟ್ಟಿ, ಬಹದ್ದೂರ್ ಘಟ್ಟ, ಬಸವನಶಿವನಕೆರೆ, ಲಿಂಗವ್ವನಾಗ್ತಿಹಳ್ಳಿ, ನೆಲ್ಲಿಕಟ್ಟೆ, ಪೇಲೂರಹಟ್ಟಿ, ಮಾಡನಾಯಕನಹಳ್ಳಿ, ಚಿಕ್ಕಪ್ಪನಹಳ್ಳಿ, ಮುದ್ದಾಪುರ, ಸಿದ್ದವ್ವನದುರ್ಗ, ಹಳೇ ಕಲ್ಲಹಳ್ಳಿ, ಗೋನೂರು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗಿದ್ದು, ಈ ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ಮಾಹಿತಿನೀಡಿದರು.ಚಳ್ಳಕೆರೆ ತಾಲ್ಲೂಕಿನಲ್ಲಿ 15 ಗ್ರಾಮಗಳು, ಹಿರಿಯೂರು 53 ಹಳ್ಳಿಗಳು, ಹೊಳಲ್ಕೆರೆ 32 ಹಳ್ಳಿಗಳು, ಹೊಸುದರ್ಗ 15 ಗ್ರಾಮಗಳಲ್ಲಿ ಹಾಗೂ ಮೊಳಕಾಲ್ಮುರು ತಾಲ್ಲೂಕಿನಲ್ಲಿ ಸದ್ಯದ ಮಟ್ಟಿಗೆ ಕುಡಿಯುವ ನೀರಿನ ಸಮಸ್ಯೆ ಇಲ್ಲ. ಇನ್ನೂ ಒಂದು ವಾರದಲ್ಲಿ ತುಮಕೂರ್ಲಹಳ್ಳಿ, ದೇವಸಮುದ್ರ, ಬಿ.ಜಿ.ಕೆರೆ ವ್ಯಾಪ್ತಿಯ ಕೆಲವು ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, ತಾಲ್ಲೂಕುವಾರು ಕುಡಿಯುವ ನೀರಿನ ಸಮಸ್ಯೆ ಇರುವ ಗ್ರಾಮಗಳ ಮಾಹಿತಿ ಹಾಗೂ ಕೈಗೊಂಡ ಕ್ರಮಗಳ ಕುರಿತು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಟಿ.ವೆಂಕಟೇಶ್, ಟ್ಯಾಂಕರ್ ಮೂಲಕ ಸರಬರಾಜು ಮಾಡುವ ಕುಡಿಯುವ ನೀರು ಕುಡಿಯಲು ಯೋಗ್ಯವಾಗಿದೆಯೇ ಎಂಬುವುದರ ಕುರಿತು ಪರೀಕ್ಷೆ ನಡೆಸಿ ನಂತರ ನೀರು ಸರಬರಾಜು ಮಾಡಬೇಕು. ಇದರ ಜೊತೆಗೆ ಬೋರ್‌ವೆಲ್ ನೀರು ಹಾಗೂ ಆರ್.ಓ. ಘಟಕದ ನೀರನ್ನು ನಿಯಮಿತವಾಗಿ ಪರೀಕ್ಷೆ ನಡೆಸಲು ಸೂಚನೆ ನೀಡಿದರು. ಜಿಲ್ಲೆಯಲ್ಲಿ ಪ್ರಸ್ತುತ ದಿನಗಳಲ್ಲಿ ಎಷ್ಟು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರಿದೆ, ಈ ಸಮಸ್ಯೆಯಾತ್ಮಕ ಗ್ರಾಮಗಳಿಗೆ ಕೈಗೊಂಡಿರುವ ಕ್ರಮಗಳು, ಟ್ಯಾಂಕರ್ ಪೂರೈಕೆ ಮಾಡುವ ಗ್ರಾಮಗಳಲ್ಲಿ ಇರುವ ಜನಸಂಖ್ಯೆ, ಗ್ರಾಮದಲ್ಲಿರುವ ಇರುವ ಬೋರ್‌ವೆಲ್‌ಗಳ ಮಾಹಿತಿ ಸೇರಿದಂತೆ ಇನ್ನೂ ವಾರ ಹಾಗೂ ಹದಿನೈದು ದಿನಗಳಲ್ಲಿ ಸಮಸ್ಯೆಯಾಗುವ ಗ್ರಾಮಗಳ ಪಟ್ಟಿಯನ್ನು ಸಿದ್ದಪಡಿಸಿ ಶೀಘ್ರ ವರದಿ ನೀಡುವಂತೆ ತಿಳಿಸಿದ ಅವರು, ಬರ ಹಿನ್ನಲೆಯಲ್ಲಿ ಜನರಿಗೆ ಕುಡಿಯುವ ನೀರು ಕೊಡುವುದು ನಮ್ಮ ಮೊದಲ ಆದ್ಯತೆಯಾಗಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ತೆರೆಯಲಾಗಿರುವ ಗೋಶಾಲೆಗಳಲ್ಲಿ ಎಷ್ಟು ಜಾನುವಾರುಗಳಿವೆ.

ಪುಟ 2






## ಫಾಸ್ಟ್ ನ್ಯೂಸ್

### ವಿಶ್ವ ಮಲೇರಿಯಾ ದಿನ: ಮೇ 03ರಂದು ಜಾಥಾ

» **ಚಿತ್ರದುರ್ಗ**

ಚಿತ್ರದುರ್ಗ ನಗರದ ಎಸ್.ಜೆ.ಪ್ಯಾರಾ ಮೆಡಿಕಲ್ ಕಾಲೇಜ್ (ರಂಗಯ್ಯನಬಾಗಿಲು ಹತ್ತಿರ) ಆವರಣದಲ್ಲಿ ಇದೇ ಮೇ 03ರಂದು ಬೆಳಿಗ್ಗೆ 9.30ಕ್ಕೆ ವಿಶ್ವ ಮಲೇರಿಯಾ ದಿನದ ಅಂಗವಾಗಿ ಜಾಥಾ ಕಾರ್ಯಕ್ರಮ ಆಯೋಜಿಸಲಾಗಿದೆ. ಜಾಥಾವು ದೊಡ್ಡಪೇಟೆ ಮುಖ್ಯ ಬೀದಿಯಿಂದ ಉಚ್ಚಂಗಿ ಯಲ್ಲಮ್ಮನ ದೇವಸ್ಥಾನ ಮುಂಭಾಗದಿಂದ ಈಶ್ವರ ದೇವಸ್ಥಾನದ ಮಾರ್ಗವಾಗಿ ಕರುವಿನಕಟ್ಟೆ ವೃತ್ತದಿಂದ ಉಜ್ಜಿನಿ ಮಠ ಮಾರ್ಗವಾಗಿ ಎಸ್.ಜೆ.ಪ್ಯಾರಾ ಮೆಡಿಕಲ್ ಕಾಲೇಜ್‌ವರೆಗೆ ಜಾಥಾ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿ ರ್ವಾಹಕ ಅಧಿಕಾರಿ ಎಸ್.ಜೆ.ಸೋಮಶೇಖರ್ ಹಾಗೂ ಎಲ್ಲಾ ಕಾರ್ಯಕ್ರಮದ ಅನುಷ್ಠಾನಾಧಿಕಾರಿಗಳು ಹಾಗೂ ತಾಲ್ಲೂಕು ಆರೋಗ್ಯಾಧಿಕಾರಿಗಳು ಭಾಗವಹಿಸುವರು.

### ಟಿಪ್ಪು ಹುತಾತ್ಮ ದಿನ

» **ಚಿತ್ರದುರ್ಗ**

ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟೀಷರ ವಿರುದ್ದ ಹೋರಾಡಿ ಮಡಿದ ಸ್ವಾತಂತ್ರ್ಯ ಸೇನಾನಿ ಮೈಸೂರು ಹುಲಿ ಟಿಪ್ಪುಸುಲ್ತಾನ್‌ರವರ 225 ನೇ ಹುತಾತ್ಮರ ದಿನಾಚರಣೆಯನ್ನು ಮೇ. 4 ರಂದು ಬೆಳಿಗ್ಗೆ 11 ಕ್ಕೆ ದಾವಣಗೆರೆ ರಸ್ತೆಯಲ್ಲಿರುವ ಎನ್.ಬಿ.ಟಿ. ಹಾಲ್‌ನಲ್ಲಿ ಆಚರಿಸಲಾಗುವುದು. ಟಿಪ್ಪುಸುಲ್ತಾನ್ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಕರ್ನಾಟಕ ರಾಜ್ಯ ಟಿಪ್ಪುಸುಲ್ತಾನ್ ಅಭಿಮಾನಿಗಳ ಮಹಾವೇದಿಕೆ ರಾಜ್ಯಾಧ್ಯಕ್ಷ ಟಿಪ್ಪುಖಾಸಿಂ ಆಲಿ ಮನವಿ ಮಾಡಿದ್ದಾರೆ.

### ನೀರಿನ ಸಮಸ್ಯೆ: ಜವಾಬ್ದಾರಿಯಿಂದ ನಿರ್ವಹಿಸಿ

» **ಮೊದಲ ಪುಟದಿಂದ**

ಗೋಶಾಲೆಗಳಲ್ಲಿ ಪ್ರತಿನಿತ್ಯವೂ ಖರ್ಚಾಗುವ ಮೇವು ಮಾಹಿತಿ ನಿಖರವಾಗಿರಬೇಕು. ಗೋಶಾಲೆಗಳಲ್ಲಿ ಕುಡಿಯುವ ನೀರು, ನೆರಳಿನ ವ್ಯವಸ್ಥೆ, ಮೇವು ಇತ್ಯಾದಿಗಳು ಸಮರ್ಪಕವಾಗಿ ವಿತರಣೆಯಾಗುತ್ತಿದೆಯೇ ಎಂಬುವುದರ ಕುರಿತು ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಬೇಕು. ಗೋಶಾಲೆಗಳಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ತಿಳಿಸಿದರು. ಸಹಾಯವಾಣಿ ಸಂಖ್ಯೆಗೆ ಸ್ವೀಕೃತವಾದ ದೂರುಗಳ ವರದಿ ನೀಡಿ: ಜಿಲ್ಲೆಯಲ್ಲಿ ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರು ಸಮಸ್ಯೆ ಕಂಡುಬಂದಲ್ಲಿ, ತ್ವರಿತವಾಗಿ ಸ್ಪಂದಿಸಲು ಈ ಹಿಂದೆ ತಾಲ್ಲೂಕು ಕಚೇರಿಗಳಲ್ಲಿ ತಾಲ್ಲೂಕುವಾರು ಸಹಾಯವಾಣಿ ಪ್ರಾರಂಭಿಸಲಾಗಿತ್ತು. ಸಹಾಯವಾಣಿ ಸಂಖ್ಯೆಗೆ ಕಳೆದ ಎರಡು ತಿಂಗಳ ಹಿಂದೆ ತಾಲ್ಲೂಕುವಾರು ಸ್ವೀಕೃತವಾದ ದೂರುಗಳ ಮಾಹಿತಿಯ ವರದಿ ನೀಡುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸೂಚನೆ ನೀಡಿದರು. ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಜೆ.ಸೋಮಶೇಖರ್, ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಉಪವಿಭಾಗಾಧಿಕಾರಿ ಎಂ.ಕಾರ್ತೀಕ್, ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ಬಸವನಗೌಡ ಪಾಟೀಲ್, ಪಶುಪಾಲನಾ ಮತ್ತು ಪಶುವೈದ್ಯಕೀಯ ಇಲಾಖೆಯ ಉಪನಿರ್ದೇಶಕಿ ಇಂದಿರಾಬಾಯಿ, ಜಿಲ್ಲಾ ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕ ಮಹೇಂದ್ರ ಕುಮಾರ್, ಜಿಲ್ಲೆಯ ಆರು ತಾಲ್ಲೂಕುಗಳ ತಹಶೀಲ್ದಾರ್‌ಗಳು, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮೀಣ ಕುಡಿಯುವ ನೀರು ಇಲಾಖೆ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

### ಅನಾಮಧೇಯ ಶವ ಪತ್ತೆ

» **ದಾವಣಗೆರೆ**

ಮಾಯಕೊಂಡ ಪೊಲೀಸ್ ಠಾಣೆಯ ವ್ಯಾಪ್ತಿಯ ವಿಠಲಾಪುರದ ಸೇತುವೆಯ ಬಳಿಯ ಭದ್ರಾ ಚಾನಲ್ ಹತ್ತಿರದ ಜಮೀನಿನ ಬಳಿ ಅನಾಮಧೇಯ ಶವ ಪತ್ತೆಯಾಗಿದೆ. ಶವವು ಮಹಿಳೆಯ ಶವವಾಗಿದ್ದು, ಸುಮಾರು 55–60 ವರ್ಷ ವಯೋಮಾನದ 'ವರಾಗಿರುತ್ತಾರೆ. ಚಹರೆ ವಿವರ; ಸದೃಢ ಮೈಕಟ್ಟು, 4–5 ಅಡಿ ಎತ್ತರ, ಗೋಧಿ ಮೈಬಣ್ಣ, ಆಕಾಶ ನೀಲಿ ಬಣ್ಣದ ಲಂಗ, ಹಸಿರು ಜಾಕೀಟ್ ಹಾಗೂ ಹಸಿರು ಬಣ್ಣದ ಬಳೆ ಧರಿಸಿರುತ್ತಾರೆ ಎಂದು ಮಾಯಕೊಂಡ ಪೊಲೀಸ್ ಠಾಣೆಯ ಉಪನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಪದವಿ ಕಾಲೇಜು ವಿದ್ಯಾರ್ಥಿಗಳಿಂದ ಜಾಥಾ

» **ದಾವಣಗೆರೆ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಪದವಿ ಲೀಡ್ ಕಾಲೇಜು ದಾವಣಗೆರೆ ಇವರ ಸಹಯೋಗದಲ್ಲಿ ಮೇ.4 ರಂದು ಬೆಳಿಗ್ಗೆ 9 ಗಂಟೆಗೆ ನಗರದ ಎಲ್ಲ ಪದವಿ ಕಾಲೇಜುಗಳ ವಿದ್ಯಾರ್ಥಿಗಳಿಂದ ಮತದಾನ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಜಾಥಾವು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಿಂದ ಪ್ರಾರಂಭವಾಗಿ ಗುಂಡಿ ವೃತ್ತದವರೆಗೆ ಸಾಗಿ ಮುಕ್ತಾಯವಾಗಲಿದೆ ಎಂದು ಜಿಪಂ ಸಿಇಓ ಸುರೇಶ್.ಬಿ.ಇಟ್ನಾಳ್ ತಿಳಿಸಿದ್ದಾರೆ.

# ಚಿತ್ರದುರ್ಗ ಅಬಕಾರಿ ಡಿಸಿ ವಿರುದ್ಧದ ಎಸಿಬಿ ಪ್ರಕರಣ ವಜಾ ಮಾಡಿದ ಸುಪ್ರೀಂ ಕೋರ್ಟ್

» **ನಮ್ಮಜನ ಸಮಾಚಾರ**

ಚಿತ್ರದುರ್ಗ: ಚಿತ್ರದುರ್ಗ ಜಿಲ್ಲೆಯ ಅಬಕಾರಿ ಉಪ ಆಯುಕ್ತರಾಗಿದ್ದ ನಾಗಶಯನ ವಿರುದ್ಧ ಹೂಡಲಾಗಿದ್ದ ಭ್ರಷ್ಟಾಚಾರದ ಪ್ರಕರಣವನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ಕಳೆದ 2022 ರಲ್ಲಿ ಚಿತ್ರದುರ್ಗದ "ದುರ್ಗದ ಸಿರಿ" ಹೋಟೆಲ್ ಮಾಲೀಕರಾದ ಜಿ.ಟಿ. ಬಾಬುರೆಡ್ಡಿ ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ಅಂದಿನ ಅಬಕಾರಿ ಉಪ ಆಯುಕ್ತರಾಗಿದ್ದ ನಾಗಶಯನ ಅವರ ವಿರುದ್ಧ ದೂರು ನೀಡಿದ್ದರು.

**ಚಿತ್ರದುರ್ಗದ ಅಬಕಾರಿ ಉಪ ಆಯುಕ್ತ:** ನಾಗಶಯನ ಬಾರ್ ಗಳ ಪರವಾನಗಿ ನವೀಕರಣಕ್ಕೆ ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ ಹಾಗೂ ಈಗಾಗಲೇ ಸ್ವಲ್ಪ ಪ್ರಮಾಣದ ಲಂಚ ನೀಡಲಾಗಿದೆ.ಲಂಚದ ಹಣವನ್ನು ಅವರ ಕಾರು ಚಾಲಕನ ಕಡೆ ನೀಡಲಾಗಿದೆ.

ಅವರು ನಮ್ಮಿಂದ ಲಂಚ ಪಡೆದಿದ್ದಾರೆ ಎಂದು ಆರೋಪಿಸಿ ಕೆಲವು ಆಡಿಯೋ ದಾಖಲೆಗಳನ್ನು ನೀಡಿ ಎಸಿಬಿಗೆ ದೂರು ನೀಡಿದ್ದರು. ಈ ದೂರಿನ ಆಧಾರದ ಮೇಲೆ ಮೊಕದ್ದಮೆಯನ್ನು ದಾಖಲಿಸಿಕೊಂಡಿದ್ದ

ಎಸಿಬಿ ಅಧಿಕಾರಿಗಳು ತನಿಖೆ ನಡೆಸಿದ್ದರು.

ಆದರೆ ತಮ್ಮ ಮೇಲಿನ ಆರೋಪವನ್ನು ನಿರಾಕರಿಸಿದ್ದ ನಾಗಶಯನ ಅವರು ಈ ಪ್ರಕರಣದ ಕುರಿತು ಹೈಕೋರ್ಟ್ ಮೊರೆ ಹೋಗಿದ್ದರು.ತಮ್ಮಮೇಲೆಮಾಡಲಾಗಿರುವ ಭ್ರಷ್ಟಾಚಾರದ ಆರೋಪಗಳೆಲ್ಲವೂ





ಸಂಪೂರ್ಣ ಸುಳ್ಳು ಯಾವುದೇ ತಪ್ಪು ಮಾಡಿಲ್ಲ ಹಾಗೂ ಯಾರಿಂದಲೂ ಹಣ ಪಡೆದಿಲ್ಲ ದೂರುದಾರರು ಮಾಡಿರುವ ಆರೋಪಗಳು ಎಲ್ಲಾ ನಿರಾಧಾರವಾಗಿವೆ ಎಂದು ವಾದಿಸಿದ್ದರು.

ಅಬಕಾರಿ ಅಧಿಕಾರಿ ನಾಗಶಯನ ಅವರ ವಾದವನ್ನು ಮಾನ್ಯ ಮಾಡಿದ್ದ ಹೈ ಕೋರ್ಟ್ ಇಡೀ ಪ್ರಕರಣವನ್ನು ರದ್ದು ಗೊಳಿಸಿತ್ತು. ನಂತರ ದೂರುದಾರ ಬಾಬುರೆಡ್ಡಿ ಹೈ ಕೋರ್ಟ್ ತೀರ್ಪು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಮೊಕದ್ದಮೆಯ ವಿಚಾರಣೆ ನಡೆಸಿದ ಉಚ್ಚ ನ್ಯಾಯಾಲಯ ಮಂಗಳವಾರ (30ಏಪ್ರಿಲ್ 2024)ಸಂಜೆ ತೀರ್ಪು ಪ್ರಕಟಿಸಿ ಕರ್ನಾಟಕ ಹೈ ಕೋರ್ಟ್ ಆದೇಶವನ್ನು ಎತ್ತಿ ಹಿಡಿದಿದೆ.

ಅಬಕಾರಿ ಅಧಿಕಾರಿ ನಾಗಶಯನ ಅವರು ಬಾರ್ ಗಳ ಪರವಾನಗಿ ನವೀಕರಣ ಸೇರಿದಂತೆ ಸಂಬಂಧಿಸಿದ ದೂರುದಾರರ ಯಾವುದೇ ಕಡತಗಳನ್ನು ಕಚೇರಿಯಲ್ಲಿ ಬಾಕಿ ಉಳಿಸಿಕೊಂಡಿಲ್ಲ ಹಾಗೂ ಯಾವುದೇ ಲಂಚ ಪಡೆದಿಲ್ಲ ಆದರೂ ಮೊಕದ್ದಮೆ ದಾಖಲಿಸಿರುವುದು ಸರಿಯಲ್ಲ ಎಂದು ಕೋರ್ಟ್ ನೀಡಿರುವ ತೀರ್ಪಿನಲ್ಲಿ ಉಲ್ಲೇಖಿಸಿದೆ.

# ದ್ವೈವಾರ್ಷಿಕ ವಿಧಾನ ಪರಿಷತ್ ಚುನಾವಣೆ

## ರಾಜ್ಯದ 6 ವಿಧಾನ ಪರಿಷತ್ ಸ್ಥಾನಗಳ ಚುನಾವಣೆಗೆ ವೇಳಾಪಟ್ಟಿ ಪ್ರಕಟ, ದಾವಣಗೆರೆ ಜಿಲ್ಲೆಯಲ್ಲಿ ಎರಡು ಶಿಕ್ಷಕರ ಕ್ಷೇತ್ರ, ಒಂದು ಪದವೀಧರ ಕ್ಷೇತ್ರ

» **ದಾವಣಗೆರೆ**

ಚುನಾವಣಾ ಆಯೋಗವು ವಿಧಾನ ಪರಿಷತ್ತಿನ ದ್ವೈವಾರ್ಷಿಕ ಚುನಾವಣೆಗೆ ವೇಳಾಪಟ್ಟಿ ಪ್ರಕಟಿಸಿದ್ದು ದಾವಣಗೆರೆ ಜಿಲ್ಲೆ ಎರಡು ಶಿಕ್ಷಕರ ಕ್ಷೇತ್ರ ಹಾಗೂ ಒಂದು ಪದವೀಧರರ ಕ್ಷೇತ್ರದ ವ್ಯಾಪ್ತಿಯನ್ನು ಹೊಂದಿದ್ದು ಜೂನ್ 3 ರಂದು ಮತದಾನ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಹಾಗೂ ಸಹಾಯಕ ಚುನಾವಣಾಧಿಕಾರಿ ಡಾ; ವೆಂಕಟೇಶ್ ಎಂ.ವಿ ತಿಳಿಸಿದ್ದಾರೆ.

ಜೂನ್ 21 ಕ್ಕೆ ವಿಧಾನ ಪರಿಷತ್ತಿನ 3 ಪದವೀಧರರ ಹಾಗೂ 3 ಶಿಕ್ಷಕರ ಕ್ಷೇತ್ರದ ಸ್ಥಾನಗಳ ಅವಧಿ ಮುಕ್ತಾಯವಾಗುವುದರಿಂದ ದ್ವೈವಾರ್ಷಿಕ ಚುನಾವಣೆಗೆ ವೇಳಾಪಟ್ಟಿ ಪ್ರಕಟಿಸಲಾಗಿದೆ. ಮೇ 9 ರಂದು ಅಧಿಸೂಚನೆ ಪ್ರಕಟವಾಗಲಿದ್ದು ಮೇ 16 ರ ವರೆಗೆ ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನವಾಗಿರುತ್ತದೆ. ಮೇ 17 ರಂದು ನಾಮಪತ್ರಗಳ ಪರಿಶೀಲನೆ, ಮೇ 20 ರಂದು ನಾಮಪತ್ರಗಳ ವಾಪಸ್ ಪಡೆಯಲು ಕೊನೆಯ ದಿನವಾಗಿರುತ್ತದೆ. ಜೂನ್ 3 ರಂದು ಬೆಳಗ್ಗೆ 8 ರಿಂದ ಸಂಜೆ 4 ಗಂಟೆಯವರೆಗೆ ಮತದಾನ ನಡೆಯಲಿದೆ. ಮತ ಎಣಿಕೆಯು ಜೂನ್ 6 ರಂದು ನಡೆಯಲಿದ್ದು ಜೂನ್ 12 ರವರೆಗೆ ನೀತಿ ಸಂಹಿತೆ ಜಾರಿಯಲ್ಲಿರುತ್ತದೆ. ವಿಧಾನ ಪರಿಷತ್ ಚುನಾವಣಾ ವೇಳಾಪಟ್ಟಿಪ್ರಕಟವಾಗಿರುವುದರಿಂದ ನೀತಿಸಂಹಿತೆ ಜಾರಿಯಲ್ಲಿರುತ್ತದೆ.



ದಾವಣಗೆರೆ ಜಿಲ್ಲೆಯಲ್ಲಿ ಒಟ್ಟು 3 ವಿಧಾನ ಪರಿಷತ್ ಸದಸ್ಯರ ಆಯ್ಕೆಗೆ ಚುನಾವಣೆ; ಕರ್ನಾಟಕ ನೈಋತ್ಯ ಪದವೀಧರರ ಕ್ಷೇತ್ರಕ್ಕೆ ಶಿವಮೊಗ್ಗ, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಕೊಡಗು ಜಿಲ್ಲೆಗಳು ಹಾಗೂ ದಾವಣಗೆರೆ ಜಿಲ್ಲೆಯ ಚನ್ನಗಿರಿ, ಹೊನ್ನಾಳಿ, ನ್ಯಾಮತಿ ತಾಲ್ಲೂಕುಗಳು ಸೇರಲಿವೆ.

ಕರ್ನಾಟಕ ಆಗ್ನೇಯ ಶಿಕ್ಷಕರ ಕ್ಷೇತ್ರದ ವ್ಯಾಪ್ತಿ; ಚಿತ್ರದುರ್ಗ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳು ಹಾಗೂ ದಾವಣಗೆರೆ ಜಿಲ್ಲೆಯ ದಾವಣಗೆರೆ, ಹರಿಹರ, ಜಗಳೂರು ತಾಲ್ಲೂಕುಗಳು ಸೇರಲಿವೆ. ಕರ್ನಾಟಕ ನೈಋತ್ಯ ಶಿಕ್ಷಕರ ಕ್ಷೇತ್ರದ ವ್ಯಾಪ್ತಿ; ಶಿವಮೊಗ್ಗ, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಕೊಡಗು ಜಿಲ್ಲೆಗಳು ಹಾಗೂ ದಾವಣಗೆರೆ ಜಿಲ್ಲೆಯ ಚನ್ನಗಿರಿ, ಹೊನ್ನಾಳಿ, ನ್ಯಾಮತಿ ತಾಲ್ಲೂಕುಗಳು ಈ ಕ್ಷೇತ್ರದಲ್ಲಿ ಬರಲಿವೆ.

# 18 ವರ್ಷ ಮೇಲ್ಪಟ್ಟ ಎಲ್ಲರೂ ಮತದಾನ ಮಾಡಬೇಕು, ಸುರೇಶ್ ಬಿ.ಇಟ್ನಾಳ್



» **ದಾವಣಗೆರೆ**

ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಮೇ 7 ರಂದು ಚುನಾವಣೆ ನಡೆಯಲಿದ್ದು ಪ್ರತಿಯೊಂದು ಮತವೂ ಮೌಲ್ಯಯುತವಾಗಿದ್ದು 18 ವರ್ಷ ಮೇಲ್ಪಟ್ಟ ಎಲ್ಲರೂ ಮತದಾನ ಮಾಡಬೇಕೆಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಸ್ವೀಪ್ ಸಮಿತಿ ಅಧ್ಯಕ್ಷರಾದ ಸುರೇಶ್ ಬಿ.ಇಟ್ನಾಳ್ ತಿಳಿಸಿದರು.

ಅವರು ಗುರುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸ್ವೀಪ್ ಸಮಿತಿ, ಜಿಲ್ಲಾ ಆಯುಷ್ ಇಲಾಖೆ, ಅಶ್ವಿನಿ ಆಯುರ್ವೇದಿಕ್ ಮೆಡಿಕಲ್ ಕಾಲೇಜು, ಸುಶ್ರುತ ಆಯುರ್ವೇದಿಕ್ ಮೆಡಿಕಲ್ ಕಾಲೇಜು, ತಪೋವನ ಆಯುರ್ವೇದಿಕ್ ಮೆಡಿಕಲ್ ಕಾಲೇಜು, ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ಜಯದೇವ ಸರ್ಕಲ್‌ನಲ್ಲಿ ಏರ್ಪಡಿಸಲಾದ ವಾಕಥಾನ್ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದರು.

ಮತದಾನ ದಿನ ಅರ್ಹರೆಲ್ಲರೂ ಕಡ್ಡಾಯವಾಗಿ ಮತದಾನ ಮಾಡಬೇಕು, ಚುನಾವಣೆಯಲ್ಲಿ ಪ್ರತಿಯೊಂದು ಮತವೂ ಅಮೂಲ್ಯ. ತಾವುಗಳು ಮತದಾನ ಮಾಡುವುದರ ಜೊತೆಗೆ ಮತ್ತೊಬ್ಬರನ್ನು ಮತದಾನ ಮಾಡಲು ಪ್ರೇರೆಪಿಸಬೇಕು. ಹಾಗೂ ಮತದಾನ ಮಾಡುವುದು ಎಲ್ಲಾ ನಾಗರಿಕರ ಕರ್ತವ್ಯ ಮತ್ತು ಜವಾಬ್ದಾರಿಯಾಗಿದೆ, ಈ ಮೂಲಕ ಪ್ರಜಾಪ್ರಭುತ್ವ ಹಬ್ಬದಲ್ಲಿ ಎಲ್ಲರೂ ಪಾಲ್ಗೊಳ್ಳುವಂತಾಗಬೇಕು ಎಂದರು. ಜಾಥಾದಲ್ಲಿನ ಘೋಷಣೆಗಳು; ಭಾರತದ ಭವಿಷ್ಯ ನೀವು ನೀಡುವ ಮತದಲ್ಲಿದೆ, ಮರೆಯದೆ ಮತ ಚಲಾಯಿಸಿ, ಪ್ರಜಾಪ್ರಭುತ್ವ ನಮ್ಮಿಂದ ಮತದಾನ ಹೆಮ್ಮೆಯಿಂದ, ನಮ್ಮ ಮತ ನಮ್ಮ ಭವಿಷ್ಯ, ನಮ್ಮ ವೋಟು ನಮ್ಮ ಪವರ್, ನಮ್ಮ ಮತ ನಮ್ಮ ಹಕ್ಕು, ನಮ್ಮ ನಿಮ್ಮೆಲ್ಲರ ಗುರುತಿನ ದಿನ ಮತದಾನದ ದಿನ, ಎಂಬ ಘೋಷವಾಕ್ಯಗಳೊಂದಿಗೆ ಜಯದೇವ ಸರ್ಕಲ್‌ನಿಂದ ಆರಂಭಗೊಂಡು ವಿದ್ಯಾರ್ಥಿಭವನ, ಜಿಲ್ಲಾ ಆಸ್ಪತ್ರೆ ಮೂಲಕ ಗುಂಡಿ ಸರ್ಕಲ್ ನಲ್ಲಿ ಅಂತ್ಯವಾಯಿತು. ಜಿಲ್ಲಾ ಆಯುಷ್ ಅಧಿಕಾರಿ ಡಾ.ಯೋಗೇಂದ್ರ ಕುಮಾರ್ ಮತದಾರರ ಪ್ರತಿಜ್ಞಾವಿಧಿ ಬೋಧಿಸಿದರು ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಮಲ್ಲನಾಯ್ಕ, ಮಹಾನಗರ ಪಾಲಿಕೆ ಆಯುಕ್ತೆ ರೇಣುಕಾ, ಅಶ್ವಿನಿ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ತಪೋವನ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಪ್ರಾಂಶುಪಾಲರು ಉಪನ್ಯಾಸಕರು ವಿದ್ಯಾರ್ಥಿಗಳು ಸಿಬ್ಬಂದಿಗಳು ಹಾಗೂ ಜಿಲ್ಲಾ ಆಯುಷ್ ಇಲಾಖೆ ಎಲ್ಲಾ ವೈದ್ಯಾಧಿಕಾರಿಗಳು ಸಿಬ್ಬಂದಿಗಳು, ಭಾರತ ಸೇವಾದಳದ ಸಿಬ್ಬಂದಿಗಳು ಭಾಗವಹಿಸಿದ್ದರು.

# ಪೌರಕಾರ್ಮಿಕರಿಗೆ ಸನ್ಮಾನ: ವಸ್ತ್ರ ವಿತರಣೆ

» **ಹಿರಿಯೂರು**

ಅಂತರಾಷ್ಟ್ರೀಯ ಕಾರ್ಮಿಕ ದಿನಾಚರಣೆ ಅಂಗವಾಗಿ ಮನವಿ ಟ್ರಸ್ಟ್ ವತಿಯಿಂದ ಹಿರಿಯೂರಿನ ವೇದಾವತಿ ನಗರದ 100 ಫೀಟ್ ರಸ್ತೆಯಲ್ಲಿ ಪೌರಕಾರ್ಮಿಕರಿಗೆ ಸನ್ಮಾನ ಸಮಾರಂಭ ಹಾಗೂ ಹೊಸ ವಸ್ತ್ರವನ್ನು ಉಡುಗೊರೆಯಾಗಿ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು.

ಈ ಸಂದರ್ಭದಲ್ಲಿ ಮನವಿ ಟ್ರಸ್ಟ್ ಸಂಸ್ಥಾಪಕರಾದ ಮಾನಸ ಮಂಜುನಾಥ್ ಅವರು ಮಾತನಾಡಿ ಪ್ರತಿಯೊಬ್ಬ ಕಾರ್ಮಿಕರು ನಮ್ಮ ದೇಶದ ಆಧಾರ ಸ್ತಂಭ , ಅದೇ ರೀತಿ ಪೌರ ಕಾರ್ಮಿಕರು ಪ್ರತಿನಿತ್ಯ ಜನರ ಆರೋಗ್ಯಕ್ಕಾಗಿ, ರಕ್ಷಣೆಗಾಗಿ, ಸ್ವಚ್ಛತೆಗಾಗಿ , ಶ್ರಮವಹಿಸಿ ಕೆಲಸವನ್ನು ನಿರ್ವಹಿಸುತ್ತಾರೆ ಹಾಗಾಗಿ ಇಂಥವರನ್ನ ಗುರುತಿಸುವುದು ಬಹಳ ಮುಖ್ಯ ಎಂದು ತಿಳಿಸಿದರು . ಈ ಕಾರ್ಯಕ್ರಮಕ್ಕೆ



ನಗರಸಭೆ ಸದಸ್ಯರಾದ ಜಿ.ಎಸ್ ತಿಪ್ಪೇಸ್ವಾಮಿ, ರಕ್ಷಣಾ ವೇದಿಕೆ ಗೌರವಾಧ್ಯಕ್ಷರಾದ ಗೋ. ಬಸವರಾಜ್, ಎಚ್ ಐ ಓ ಅಶೋಕ್, ಡಿ ತಿಪ್ಪೇಸ್ವಾಮಿ , ಹೆಚ್ ತಿಪ್ಪೇಸ್ವಾಮಿ, ವಿನಯ್ ಜಿ, ಕುಮಾರಸ್ವಾಮಿ, ವೀಣಾ ಹಾಗೂ ಬಡಾವಣೆಯ ನಾಗರಿಕರು ಉಪಸ್ಥಿತರಿದ್ದರು

**ಪ್ರಮುಖ ಸುದ್ದಿ**

## ಜಿಲ್ಲಾ ಆಯುಷ್ ಅಧಿಕಾರಿ ಡಾ.ಚಂದ್ರಕಾಂತ್ ಎಸ್.ನಾಗಸಮುದ್ರ ಸಾರ್ವಜನಿಕರಿಗೆ ಮನವಿ

# ಬಿಸಿಲ ಝಳ ಹೆಚ್ಚಳ: ಆರೋಗ್ಯದ ಬಗ್ಗೆ ಇರಲಿ ಎಚ್ಚರ

» **ಚಿತ್ರದುರ್ಗ**

ರಾಜ್ಯಾದ್ಯಂತ ಬಿಸಿಲಬೇಗೆ ದಿನೇ ದಿನೇ ಹೆಚ್ಚಾಗುತ್ತಿದ್ದು, ಇನ್ನೂ ಕೆಲವು ದಿನಗಳ ಕಾಲ ಉಷ್ಣ ಹವೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಬಿಸಿಲ ಝಳವು ಮನುಷ್ಯನ ಆರೋಗ್ಯದ ಮೇಲೆ ತೀವ್ರತರವಾದ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಆದ ಕಾರಣ ಸಾರ್ವಜನಿಕರು ಬಿಸಿಲಿನ ಝಳದಿಂದ ತಪ್ಪಿಸಿಕೊಳ್ಳಲು ಕೆಲವೊಂದು ಉಪಾಯ ಅನುಸರಿಸುವ ಮೂಲಕ ತಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಜಿಲ್ಲಾ ಆಯುಷ್ ಅಧಿಕಾರಿ ಡಾ.ಚಂದ್ರಕಾಂತ್ ಎಸ್ ನಾಗಸಮುದ್ರ ಸಾರ್ವಜನಿಕರಿಗೆ ಮನವಿ ಮಾಡಿದ್ದಾರೆ.

ಆಯುರ್ವೇದದಲ್ಲಿ ಈ ಕಾಲವನ್ನು ಉತ್ತರಾಯಣದ ಗ್ರೀಷ್ಮ ಋತು ಎಂದು ಕರೆದಿದ್ದು, ಈ ಕಾಲದಲ್ಲಿ ಸೂರ್ಯನ ತಾಪ ಹೆಚ್ಚಾಗಿರುತ್ತದೆ ಹಾಗೂ ವಾತಾವರಣದಲ್ಲಿ ಒಣಹಾವೆ ಇರುತ್ತದೆ. ಈ ಕಾರಣದಿಂದ ಮನುಷ್ಯನ ಶಕ್ತಿ ಸಹಜವಾಗಿ ಕುಂದು





ತತ್ಪರಿಣಾಮವಾಗಿ ಜ್ವರ, ಸುಸ್ತು, ಚರ್ಮದ ಸೋಂಕುಗಳು, ತಲೆನೋವು ಇತ್ಯಾದಿ ಕಾಯಿಲೆಗಳು ಹೆಚ್ಚಾಗಿ ಕಂಡುಬರುತ್ತವೆ. ವಿಶೇಷವಾಗಿ ಮಕ್ಕಳಲ್ಲಿ ಈ ತೀವ್ರವಾದ ಬಿಸಿಲು ಮತ್ತು ಉಷ್ಣಾಂಶ ಹೆಚ್ಚು ಅನಾರೋಗ್ಯವನ್ನು ಉಂಟುಮಾಡುತ್ತದೆ.

ಸಾರ್ವಜನಿಕರು ಕೆಲವು ಸರಳ ಉಪಾಯಗಳಿಂದ ಬಿಸಿಲ ಬೇಗೆಯಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳಬಹುದಾಗಿದೆ. ಬೇಸಿಗೆ ಕಾಲದಲ್ಲಿ ಸೇವಿಸುವ ಆಹಾರದ ಮೇಲೆ ಗಮನ ಇರಲಿ. ದ್ರವಾಂಶ ಹೆಚ್ಚಾಗಿರುವಂತಹ ಸೊಪ್ಪು, ತರಕಾರಿ, ಹಣ್ಣುಗಳನ್ನು ಹೆಚ್ಚು ಹೆಚ್ಚು ಸೇವಿಸಿ, ಇವು ದೇಹದಲ್ಲಿಯ ನೀರಿನ ಅಂಶವನ್ನು ಸಮತೋಲನದಲ್ಲಿಡಲು ಸಹಾಯಕ. ಮೇಲಿಂದ ಮೇಲೆ ಮಜ್ಜಿಗೆ, ತಂಪಾದ ಮಡಿಕೆಯ ನೀರು ಇತ್ಯಾದಿ ಆರೋಗ್ಯಕರ ಪಾನೀಯಗಳನ್ನು ಸೇವಿಸಿ. ನೈಸರ್ಗಿಕವಾಗಿ ಸಿಹಿಯಾದ ಹಣ್ಣುಗಳನ್ನು ಹಣ್ಣಿನ ರಸವನ್ನು, ಸರಳವಾಗಿ ಜೀರ್ಣವಾಗುವ ಆಹಾರವನ್ನು, ಹಾಗೂ ಮೇಲಿಂದ ಮೇಲೆ ಮಜ್ಜಿಗೆ, ಆರೋಗ್ಯದಾಯಕ ಪಾನೀಯಗಳನ್ನು ಮನೆಯಲ್ಲೇ ತಯಾರಿಸಿ ಸೇವಿಸುವುದು ಉತ್ತಮ. ಹೆಚ್ಚು ಮಸಾಲೆಯುಕ್ತ, ಹುರಿದ, ಕರಿದ ಆಹಾರ ಸೇವನೆ ಬೇಡ. ಬಿಸಿಲಿನ ಝಳದಿಂದ ತಪ್ಪಿಸಿಕೊಳ್ಳಲು ಯಾವಾಗಲೂ ಛತ್ರಿ ಅಥವಾ ತಲೆ ಮೇಲೆ ವಸ್ತ್ರವನ್ನು ಉಪಯೋಗಿಸಿ. ಹತ್ತಿ ಬಟ್ಟೆಗಳನ್ನು ಧರಿಸುವುದು ಸೂಕ್ತ.

ದೇಹಕ್ಕೆ ತಂಪನ್ನು ನೀಡುವಂತಹ ಖರ್ಜೂರ, ಒಣದ್ರಾಕ್ಷಿ, ಸಾಂಪ್ರದಾಯಕ ವಾಗಿ ತಯಾರಿಸಿದ ತುಪ್ಪ, ಹಾಲಿನಂತಹ ಶಕ್ತಿದಾಯಕ ಆಹಾರ ಸೇವಿಸಬೇಕು. ಆರೋಗ್ಯದಾಯಕ ಪಾನೀಯಗಳನ್ನು ಮನೆಯಲ್ಲೇ ತಯಾರಿಸಿ ಸೇವಿಸಿ. ಹಣ್ಣಿನ ರಸಗಳನ್ನು ಸೇವಿಸುವ ಅಭ್ಯಾಸ ಮಾಡಿಕೊಳ್ಳಿ. ತೀವ್ರವಾದ ಬಿಸಿಲಿಗೆ ಹೊರಗೆ ಹೋಗದೆ ಮುಂಜಾಗ್ರತೆ ಕೈಗೊಂಡು ತಮ್ಮ ಆರೋಗ್ಯ ಸಂರಕ್ಷಿಸಿಕೊಳ್ಳಬೇಕು ಎಂದು ಜಿಲ್ಲಾ ಆಯುಷ್ ಅಧಿಕಾರಿ ಡಾ.ಚಂದ್ರ ಕಾಂತ್ ಎಸ್ ನಾಗಸಮುದ್ರ ಅವರು ಸಾರ್ವಜನಿಕರಿಗೆ ಕರೆ ನೀಡಿದ್ದಾರೆ.

## ಫಾಸ್ಟ್ ನ್ಯೂಸ್

### ಪರಶುರಾಮಪುರದಲ್ಲಿ ರಾಮಾನುಜಾಚಾರ್ಯ ಜಯಂತಿ ಕಾರ್ಯಕ್ರಮ



» **ಚಳ್ಳಕೆರೆ**

ತಾಲ್ಲೂಕಿನ ಪರಶುರಾಮಪುರ ಗ್ರಾಮದ ಪಾವಗಡ ರಸ್ತೆಯಲ್ಲಿರುವ ಲಕ್ಷ್ಮಿಚನ್ನಕೇಶವ ದೇವಸ್ಥಾನದಲ್ಲಿ ಅಖಿಲ ಕರ್ನಾಟಕ ಶ್ರೀವೈಷ್ಣವ ಮಹಾಸಭಾ ಬೆಂಗಳೂರು ಮತ್ತು ಪರಶುರಾಮಪುರ ಶ್ರೀರಾಮಾನುಜಾಚಾರ್ಯ ಜಯಂತೋತ್ಸವದಿಂದ ಎರಡು ದಿನಗಳ ಕಾಲ ರಾಮಾನುಜಾಚಾರ್ಯರ 1007ರ ಜಯಂತ್ಯೋತ್ಸವ ಕಾರ್ಯಕ್ರಮವನ್ನು ನಡೆಸಲಾಗುವುದು ಎಂದು ಆಡಳಿತ ಮಂಡಳಿಯ ಅಧ್ಯಕ್ಷ ಎಸ್.ಎಚ್.ಸತ್ಯನಾರಾಯಣಮೂರ್ತಿ ತಿಳಿಸಿದ್ದಾರೆ. ಅವರು ಈ ಬಗ್ಗೆ ಮಾಹಿತಿ ನೀಡಿ, ಮೇ. 15 ಮತ್ತು 16 ಎರಡು ದಿನಗಳ ಕಾಲ ದೇವಸ್ಥಾನದ ಆವರಣದಲ್ಲಿ ಜಯಂತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಎಲ್ಲಾ ಭಕ್ತರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಲಾಗಿದೆ.

ಮೇ.15ರಬುಧವಾರಶ್ರೀರಾಮಾನುಜಾಚಾರ್ಯರಿಗೆ ಪಂಚಾಮೃತಾಭಿಷೇಕ, ಹೂವಿನ ಅಲಂಕಾರ, ಯತಿರಾಜರಾಮಾನುಜಾನನಾರಾಯಣಜೀಯರ ಸ್ವಾಮೀಜಿಗಳ ದಿವ್ಯಸಾನಿಧ್ಯದಲ್ಲಿ ಉಪನಯಕ ಕಾರ್ಯಕ್ರಮ ಮೇ. 16ರ ಗುರುವಾರ ಶ್ರೀಸ್ವಾಮಿಯ ಪೂಜೆ ಹಾಗೂ ಮಹಾಮಂಗಳಾರತಿ, ಪ್ರಸಾದ ವಿನಿಯೋಗ ಕಾರ್ಯಕ್ರಮವಿರುತ್ತದೆ. ಗೌರವ ಡಾಕ್ಟರೇಟ್ ಪುರಸ್ಕೃತರಾದ ಡಾ ಸಂಪತ್ ವೇಣುಗೋಪಾಲ ಆಚಾರ್ಯ, ರಾಯದುರ್ಗದ ವಿಪ್ರಮಲ್ಲೆ ವಿಶ್ವಮಾತಾಶ್ರಮ ಖ್ಯಾತ ಜ್ಯೋತಿಷಿ ಎ.ಪಿ.ರಾಮಮೂರ್ತಿ ಸ್ವಾಮೀಜಿ ಸೇರಿದಂತೆ ಅನೇಕ ಗಣ್ಯರು, ಸಾಧಕರು ಕಾರ್ಯಕ್ರಮದಲ್ಲಿ ಭಾಗವಹಿಸುವರು ಎಂದು ವ್ಯವಸ್ಥಾಪಕರು ತಿಳಿಸಿದ್ದಾರೆ. ಕಾರ್ಯಕ್ರಮದಲ್ಲಿ ಕ್ಷೇತ್ರದ ಶಾಸಕ ಟಿ.ರಘುಮೂರ್ತಿ ಭಾಗವಹಿಸಲಿದ್ದಾರೆ.

### ಹಾಟ್ ಏರ್ ಬಲೂನ್ ಸಾಹಸ ಕ್ರೀಡೆ

» **ದಾವಣಗೆರೆ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸ್ವೀಪ್ ಸಮಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಮೇ.5 ರಂದು ಸಂಜೆ 4 ಗಂಟೆಗೆ ನಗರದ ಹೈಸ್ಕೂಲ್ ಮೈದಾನದಲ್ಲಿ ಮತದಾರರ ಜಾಗೃತಿ ಕಾರ್ಯಕ್ರಮದ ಅಂಗವಾಗಿ ಹಾಟ್ ಏರ್ ಬಲೂನ್ ಸಾಹಸ ಕ್ರೀಡೆಯನ್ನು ಆಯೋಜಿಸಲಾಗಿದೆ. ಪ್ರಯುಕ್ತ ಮತದಾರರ ಜಾಗೃತಿ ಕಾರ್ಯಕ್ರಮ ಅಂಗವಾಗಿ ನಡೆಯುವ ಈ ಸಾಹಸ ಕ್ರೀಡೆಯಲ್ಲಿ ಭಾಗವಹಿಸುವವರು ತಮ್ಮ ಚುನಾವಣಾ ಗುರುತಿನ ಚೀಟಿಯ ನಕಲು ಪ್ರತಿಯೊಂದಿಗೆ ಈ ಸಾಹಸ ಕ್ರೀಡೆಯಲ್ಲಿ ಭಾಗವಹಿಸಬಹುದೆಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕಿ ಜಯಲಕ್ಷ್ಮೀಬಾಯಿ ತಿಳಿಸಿದ್ದಾರೆ.

### ಕರ್ತವ್ಯ ನಿರ್ಲಕ್ಷ್ಯ; ಎಇಇ, ಬಿಲ್ ಕಲೆಕ್ಟರ್ ಸಸ್ಪೆಂಡ್

» **ದಾವಣಗೆರೆ**

ಚೆಕ್‌ಪೋಸ್ಟ್‌ನಲ್ಲಿ ಕರ್ತವ್ಯ ನಿರ್ವಹಿಸದೇ ನಿರ್ಲಕ್ಷ್ಯ ತೋರಿದಹೊನ್ನಾಳಿವಿಭಾಗದಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕಣವಪ್ಪ ಮತ್ತು ನ್ಯಾಮತಿ ತಾಲ್ಲೂಕು ಯರಗನಾಳ್ ಗ್ರಾಮ ಪಂಚಾಯಿತಿ ಬಿಲ್ ಕಲೆಕ್ಟರ್ ಲೋಕೇಶ್ ನಾಯ್ಕ ಇವರನ್ನು ಅಮಾನತು ಮಾಡಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ; ವೆಂಕಟೇಶ್ ಎಂ.ವಿ ಆದೇಶಿಸಿದ್ದಾರೆ. ಲೋಕಸಭಾ ಚುನಾವಣೆ ನಡೆಯುತ್ತಿದ್ದು ಮೇ 7 ರಂದು ಮತದಾನ ನಡೆಯಲಿದೆ. ಮಾದರಿ ನೀತಿ ಸಂಹಿತೆಯನ್ನು ಜಾರಿಗೆ ತರಲು ಜಿಲ್ಲೆಯಾದ್ಯಂತ 32 ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಿ ಮೂರು ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲಾಗುತ್ತಿದೆ. ದಾವಣಗೆರೆ, ಶಿವಮೊಗ್ಗದಅಂತರ್ ಜಿಲ್ಲಾ ಚೆಕ್‌ಪೋಸ್ಟ್ ಜೀನಹಳ್ಳಿ ಚೆಕ್‌ಪೋಸ್ಟ್‌ಗೆ ಸದರಿ ಅಧಿಕಾರಿ, ಸಿಬ್ಬಂದಿಗಳನ್ನು ನೇಮಕ ಮಾಡಲಾಗಿತ್ತು. ದಾವಣಗೆರೆ ಕ್ಷೇತ್ರಕ್ಕೆ ಆಯೋಗದಿಂದ ನೇಮಕವಾಗಿರುವ ವಿಶೇಷ ವೆಚ್ಚ ವೀಕ್ಷಕರಾದ ಪ್ರತಿಭಾಸಿಂಗ್ ಮತ್ತು ಹೊನ್ನಾಳಿ ಉಪವಿಭಾಗಾಧಿಕಾರಿ ಹಾಗೂ ಸಹಾಯಕ ಚುನಾವಣಾಧಿಕಾರಿ ಅಭಿಷೇಕ್ ರವರು ಏಪ್ರಿಲ್ 29 ರಂದು ಮಧ್ಯಾಹ್ನ 2.25 ರ ಸಮಯದಲ್ಲಿ ಅನಿರೀಕ್ಷಿತವಾಗಿ ಚೆಕ್‌ಪೋಸ್ಟ್‌ಗೆ ಭೇಟಿ ನೀಡಿದಾಗ ಚೆಕ್‌ಪೋಸ್ಟ್‌ನ ಕರ್ತವ್ಯದಲ್ಲಿ ಯಾರು ಸಹ ಇರಲಿಲ್ಲ. ಈ ಬಗ್ಗೆ ದೂರವಾಣಿ ಕರೆ ಮಾಡಿ ತಿಳಿಸಿದ್ದರೂ ಕರ್ತವ್ಯಕ್ಕೆ ಹಾಜರಾಗಿರಲಿಲ್ಲ. ಚುನಾವಣಾ ಕರ್ತವ್ಯ ನಿರ್ಲಕ್ಷ್ಯತೆ ತೋರಿದ ಸದರಿ ನೌಕರರ ಮೇಲೆ ಪ್ರಜಾ ಪ್ರಾತಿನಿಧ್ಯಕಾಯ್ದೆ 1951 ರ 134 ನಿಯಮದನ್ವಯ ಹಾಗೂ ಸಿಸಿಎ ನಿಯಮ 1957 ರ ನಿಯಮ 10(1)(ಡಿ) ರನ್ವಯ ಅಮಾನತು ಮಾಡಿ ಆದೇಶಿಸಲಾಗಿದೆ.

**ಬರದ ನಡುವೆ ಬಿಸಿಲಿನ ಧಗೆಗೆ ಮಳೆಯ ಮೋಡಗಳೇ ಮಾಯ. ನೀರಿನ ಬವಣೆ ನೀಗಿಸಲು ಕೃಪೆ ತೋರು ಮಳೆರಾಯ**

# ನೀರಿನ ಡ್ರಮ್‌ಗಳ ಮೊರೆ ಹೋಗುತ್ತಿರುವ ಜನ

» **ಮಹದೇವಪುರ ಶಿವಮೂರ್ತಿ**

ಪರಶುರಾಂಪುರ: ಬರಕ್ಕೆ ಬೇಸತ್ತ ಜನರು ನೀರು ಸಂಗ್ರಹಕ್ಕೆ ಡ್ರಮ್ ಗಳ ಮೊರೆ ಹೋಗಿದ್ದಾರೆ.

ಬರದ ಜತೆ ಬಿಸಿಲಿನ ಧಗೆಗೆ ನೀರಿನ ಬವಣೆ ಹೆಚ್ಚಾಗುತ್ತಿದೆ.ಮಳೆ ಬರದೇ ಇದ್ದರೇ ಮುಂದೆ ಬಯಲು ಸೀಮೆಯ ಗ್ರಾಮಗಳಲ್ಲಿ ನೀರು ಪೂರೈಕೆಯಾಗುವ ಸಮಯದಲ್ಲಿ ವ್ಯತ್ಯಾಸವಾಗಬಹುದು ಎಂಬ ಸಾಧ್ಯತೆಗಳು ಕಂಡು ಬರುತ್ತಿದೆ. ಇದರಿಂದ ಪಾರಾಗುವ ಸಲುವಾಗಿ ಜನ ಹೆಚ್ಚು ನೀರು ಸಂಗ್ರಹಿಸುವ ಕಡೆಗೆ ಗಮನ ಕೊಡಲಾರಂಭಿಸಿದ್ದಾರೆ. ಪರಿಣಾಮವಾಗಿ ನೀರಿನ ಡ್ರಮ್‌ಗಳಿಗೆ ಹೆಚ್ಚಿನ ಬೇಡಿಕೆ ಉಂಟಾಗಿದೆ.

ನಗರದ ಜನರಷ್ಟೇ ಅಲ್ಲದೇ ಸುತ್ತ ಮುತ್ತಲಿನ ಹಳ್ಳಿಗಳ ಜನರೂ ಡ್ರಮ್‌ಗಳನ್ನು



ಖರೀದಿಸುತ್ತಿದ್ದಾರೆ. ಈಗಾಗಲೇ ಮನೆಗಳಲ್ಲಿ ಡ್ರಮ್‌ಗಳಿರುವವರೂ,'ಇನ್ನೂ ಒಂದೆರಡು ಇರಲಿ' ಎಂದು ಹೆಚ್ಚುವರಿಯಾಗಿ ಖರೀದಿಸುತ್ತಿದ್ದಾರೆ.

ಗ್ರಾಮೀಣ ಪ್ರದೇಶದವರು ಬ್ಯಾರೆಲ್,ಡ್ರಮ್ ಮಾರಾಟಗಾರರಿಂದ ಪಡೆದುಕೊಳ್ಳುತ್ತಿದ್ದಾರೆ.

ಬಿಂದಿಗೆ, ಕ್ಯಾನ್ ಮತ್ತು ಚಿಕ್ಕ ಡ್ರಮ್‌ಗಳಿದ್ದರೂ, ಬಹುತೇಕರು 20 25 ಬಿಂದಿಗೆಯಷ್ಟು ನೀರು ಸಂಗ್ರಹ ಸಾಮರ್ಥ್ಯದ ದೊಡ್ಡ ಡ್ರಮ್‌ಗಳನ್ನೇ ಖರೀದಿಸುತ್ತಿದ್ದಾರೆ. ಬಿಂದಿಗೆಗಳಿಗೆ ಬೇಡಿಕೆ ಕುಗ್ಗಿದೆ ಎಂದು ವ್ಯಾಪಾರಸ್ಥ ಹೇಳುತ್ತಾನೆ.

ಡ್ರಮ್‌ಗಳಿಗೆ ಬೇಡಿಕೆ ಹೆಚ್ಚಿರುವುದರಿಂದ ಮಾರಾಟಗಾರರು ಚೌಕಾಸಿಗೆ ಸೊಪ್ಪು ಹಾಕುತ್ತಿಲ್ಲ.'ಬೇಕಿದ್ದರೆ ತಗೊಳ್ಳಿ.ಬೇಡವಾದರೆ ಬಿಡಿ' ಎಂದು ಕಡ್ಡಿ ತುಂಡು ಮಾಡಿದಂತೆ ಮಾತನಾಡುವ ದೃಶ್ಯಗಳೇ ಎಲ್ಲೆಡೆ ಕಂಡುಬರುತ್ತಿವೆ.

ಕೆಲಾ ಗ್ರಾಪಂಗಳಲ್ಲಿ ನೀರಿನ ಬವಣೆ ತಪ್ಪಿಸಲು ಖಾಸಗಿ ಬೋರ್‌ವೆಲ್ ಆಸರೆಯಾಗಿರುವುದನ್ನ ಕಾಣಬಹುದು. ಅಷ್ಟಲ್ಲದೆ ಮಳೆಯ ಮುನ್ಸೂಚನೆ ಕಾಣಸಿಕೊಳ್ಳುತ್ತಿಲ್ಲ ಇದರಿಂದ ಮತ್ತಷ್ಟು ನೀರಿನ ಅಭಾವ ಎದುರಿಸಲು ಸಿದ್ದರಾಗೋಣ ಎಂಬ ಮಾತುಗಳು ಸಹಾ ಕೇಳಿಬರುತ್ತಿವೆ.

ಈಗಾಗಲೇ ತಾಲೂಕಿನ ಹದಿನಾಲ್ಕು ಹಳ್ಳಿಗಳಲ್ಲಿ ಕೊಳವೆ ಬಾವಿಗಳಲ್ಲಿ ನೀರಿನ ಲಭ್ಯತೆ ಕಡಿಮೆ ಆಗಿ ಜನರು ಪರಾಡುವ ಪರಿಸ್ಥಿತಿ ಉಂಟಾಗಿದೆ.ಅದರಲ್ಲಿ ಪರಶುರಾಂಪುರ ಹೋಬಳಿಯಲ್ಲಿನ ಕೆಲಾ ಗ್ರಾಮಗಳು ಸೇರಿಕೊಂಡಿವೆ.ಈಗೆ ಮಳೆ ಕೈಕೊಟ್ಟರೆ ಎಲ್ಲಾ ಗ್ರಾಮಗಳಲ್ಲೂ ನೀರಿನ ತೊಂದರೆ ಅನುಭವಿಸಬೇಕಾಗುವ ದಿನಗಳ ಬರಬಹುದು.

ಸ್ಥಳೀಯ ಗ್ರಾಪಂಗಳಲ್ಲಿ ನೀರಿನ ಬವಣೆ ತಪ್ಪಿಸಲು ಗ್ರಾಮ ವ್ಯಾಪ್ತಿಯ ಹಾಗೂ ಖಾಸಗಿ ಸೇರಿದಂತೆ ಬೋರ್ ವೆಲ್ ಮೊರೆ ಆದರೆ ಕೆಲಾ ಟ್ಯಾಂಕರ್ ನಲ್ಲೂ ಜನರಿಗೆ ತೊಂದರೆ ಆಗದಂತೆ ನೀರಿನ ಪೂರೈಕೆ ಮಾಡುತ್ತಿದ್ದಾರೆ.ಬರದಿಂದ ಅಂತರ್ಜಲ ಕಡಿಮೆ ಆಗಿ ತೋಟಗಳು ಸಹಾ ಒಣಗುತ್ತಿವೆ. ಇಳೆಯಲ್ಲಿ ನೀರಿದ್ದರೆ ತಾನೆ ಬರೋದು.ಮಳೆಯ ಕೃಪೆ ತೋರಿದರೆ ಮಾತ್ರ ನೀರಿನ ಸಮಸ್ಯೆಗೆ ಮುಕ್ತಿ

# ಡಿಎಆರ್ ಮೈದಾನದಲ್ಲಿ ನಡೆದ ಏರೋಬಿಕ್ಸ್

## ದೈಹಿಕ ಸಾಮರ್ಥ್ಯ ಉತ್ತೇಜಿಸುವ ಏರೋಬಿಕ್ಸ್‌ನೊಂದಿಗೆ ಮತದಾನ ಜಾಗೃತಿ

» **ದಾವಣಗೆರೆ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಜಿಲ್ಲಾ ಪೊಲೀಸ್ ಇಲಾಖೆ ಹಾಗೂ ಜಿಲ್ಲೆಯ ವಿವಿಧ ಇಲಾಖೆಗಳ ವತಿಯಿಂದ ಮೇ 2 ರಂದು ಪೊಲೀಸ್ ಕವಾಯತು ಮೈದಾನದಲ್ಲಿ ಮತದಾನ ಜಾಗೃತಿಗಾಗಿ ಏರೋಬಿಕ್ಸ್ ಏರ್ಪಡಿಸಲಾಯಿತು.

ಕಾರ್ಯಕ್ರಮದಲ್ಲಿ ಭಾಗಿಯಾದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಅಧ್ಯಕ್ಷತೆ ವಹಿಸಿ ಮಾತಾನಾಡಿ ಮೇ 7 ರಂದು ಲೋಕಸಭೆಗೆ ಚುನಾವಣೆ ನಡೆಯುತ್ತಿದೆ. ಎಲ್ಲರೂ ತಪ್ಪದೇ ಮತಗಟ್ಟೆಗೆ ಬಂದು ಮತ ಚಲಾಯಿಸಬೇಕು. ಏರೋಬಿಕ್ಸ್‌ನಿಂದ ನಮ್ಯತೆ, ಸ್ನಾಯುವಿನ ಶಕ್ತಿ, ಹೃದಯ ನಾಳೀಯ ಫಿಟ್‌ನೆಸ್‌ನೊಂದಿಗೆ ಅನಾರೋಗ್ಯವನ್ನು ತಡೆಗಟ್ಟುವ ಮತ್ತು ದೈಹಿಕ ಸಾಮರ್ಥ್ಯ ಹೆಚ್ಚಲಿದೆ. ಅದೇ ರೀತಿ ಎಲ್ಲರೂ ಮತದಾನ ಮಾಡುವುದರಿಂದ ಪ್ರಜಾಪ್ರಭುತ್ವದ ಮೌಲ್ಯ ಹೆಚ್ಚಲಿದ್ದು ಮೌಲ್ಯಯುತ ಚುನಾವಣೆಯಾಗಲಿದೆ ಎಂದರು.

ನಿಮ್ಮ ಮತ ನಿಮ್ಮ ಹಕ್ಕು, ನಿವೆಲ್ಲರೂ ತಪ್ಪದೇ ಮತದಾನ ಮಾಡಿ, ಮತದಾನ ಪ್ರಜಾಪ್ರಭುತ್ವದ




ಹೃದಯಬಡಿತ ಮತದಾನ ಮಾಡೋಣ, ದೇಶದ ಅಭಿವೃದ್ದಿಗೆ ಕೈಜೋಡಿಸೋಣ ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಮಲ್ಲನಾಯ್ಕ ಮತದಾರ ಪ್ರತಿಜ್ಞಾವಿಧಿ ಬೋಧಿಸಿದರು. ಮತದಾರ ಜಾಗೃತಿ ಅಂಗವಾಗಿ ಕೆ.ಡಿ ಡ್ಯಾನ್ಸ್ ಕಂಪನಿಯಿಂದ ಏರೋಬಿಕ್ಸ್ ಡ್ಯಾನ್ಸ್ ಮಾಡಲಾಯಿತು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಸ್ವೀಪ್ ಅಧ್ಯಕ್ಷರಾದ ಸುರೇಶ್ ಬಿ.ಇಟ್ನಾಳ್ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಕೃಷ್ಣ ನಾಯಕ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ನಾಗರಾಜ, ಡಿಡಿಪಿಐ ಕೊಟ್ರೇಶ್, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿ ಮಲ್ಲಿಕಾರ್ಜುನ್ ಮಠದ್, ತಹಶೀಲ್ದಾರ್ ಡಾ.ಅಶ್ವತ್.ಎಂ.ಬಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು. ಆರ್‌ಪಿಐ ಸೋಮಶೇಖರಪ್ಪ ಸ್ವಾಗತಿಸಿದರು.

# ಕಾರ್ಮಿಕ ದಿನಾಚರಣೆ




» **ಹಿರಿಯೂರು**

ನಗರದ ಬೆಂಗಳೂರು ರಸ್ತೆಯಲ್ಲಿರುವ ವೆಲ್ಡಿಂಗ್ ಮಾಲೀಕರು ಮತ್ತು ಕೆಲಸಗಾರರ ಕ್ಷೇಮಾಭಿವೃದ್ಧಿ ಸಂಘದ ಕಚೇರಿಯಲ್ಲಿ ಸಂಘದ ವತಿಯಿಂದ ಕಾರ್ಮಿಕ ದಿನಾಚರಣೆಯನ್ನು ಏರ್ಪಡಿಸಲಾಗಿತ್ತು. ಪಿ ಎಸ್ ಐ ಮಂಜುನಾಥ್ ರವರು ಮಾತನಾಡಿ ಕಾರ್ಮಿಕರು ಯಾವುದೇ ಸಂದರ್ಭದಲ್ಲಿ ತಮಗೆ ಸಂಕಷ್ಟದ ಪರಿಸ್ಥಿತಿ ಇದ್ದಾಗ ತಕ್ಷಣ ಪೊಲೀಸ್ ಗೆ ದೂರವಾಣಿ ಕರೆ ಮಾಡಿದ್ದಲ್ಲಿ ನಾವು ಸದಾ ಕಾಲವು ನಿಮ್ಮ ಸಂಕಷ್ಟಗಳಿಗೆ ಸ್ಪಂದಿಸುತ್ತೇವೆ ಎಂದು ಹೇಳಿದರು. ಹಾಗೂ ಕಾರ್ಮಿಕರು ಉತ್ತಮ ಜೀವನ ರೂಪಿಸಿಕೊಳ್ಳುವಂತೆ ಕರೆ ನೀಡಿದರು. ತಾಲೂಕು ಆರೋಗ್ಯ ಅಧಿಕಾರಿ ವೆಂಕಟೇಶ್ ರವರು ಕಾರ್ಮಿಕರಿಗೆ ಔಷಧದ ಕಿಟ್ ವಿತರಣೆ ಮಾಡಿ ಮಾತನಾಡಿ ಕಾರ್ಮಿಕರು ತಮ್ಮ ಆರೋಗ್ಯ ರಕ್ಷಣೆ ಕಡೆ ಹೆಚ್ಚಿನ ಗಮನಹರಿಸಿ ಎಂದು ಹೇಳಿದರು. ಕರ್ನಾಟಕ ರಾಜ್ಯ ಕಾರ್ಮಿಕ ಪರಿಷತ್ ಜಿಲ್ಲಾ ಅಧ್ಯಕ್ಷರಾದ ಪ್ರಸನ್ನ ನಾಡಿಗೇರ್ ಕಾರ್ಮಿಕ ದಿನಾಚರಣೆಯು ನಡೆದು ಬಂದ ದಾರಿಯ ಬಗ್ಗೆ ತಿಳಿಸಿದರು. ಹಿರಿಯೂರು ತಾಲೂಕು ಅಧ್ಯಕ್ಷರಾದ ಪರಮೇಶ್ ರವರು ಕಷ್ಟದ ಪರಿಸ್ಥಿತಿಯಲ್ಲಿರುವ ಸಂಘದ ಸದಸ್ಯರ ಅನೇಕ ಕುಟುಂಬಗಳಿಗೆ ಸಂಘದ ವತಿಯಿಂದ ಆರ್ಥಿಕ ಸಹಾಯ ಮಾಡಿರುವ ಬಗ್ಗೆ ಹೇಳಿದರು. ಕಾರ್ಯಕ್ರಮದಲ್ಲಿ ವರ್ತಕರಾದ ಸೂರ್ಯಪ್ರಕಾಶ್, ರಾಘವೇಂದ್ರ, ಪಾಂಡು, ವಿಷ್ಣು, ಪ್ರಸಾದ್ ಹಾಗೂ ಸಂಘದ ಅಧ್ಯಕ್ಷರಾದ ಪರಮೇಶ್, ಕಾರ್ಯದರ್ಶಿ ಬಸವರಾಜ್, ಗೌರವ ಅಧ್ಯಕ್ಷರಾದ ರಾಜಣ್ಣ, ನಯೀಮುಲ್ಲ, ಸಾದತ್ ಅಹಮದ್, ಶಾ ನವಾಜ್, ತಿಪ್ಪೇಸ್ವಾಮಿ, ಇಸ್ಮಾಯಿಲ್, ಮಣಿ, ರಾಮು, ರವಿ, ನಾಜಿಮ್, ನಾಗರಾಜ್, ಅರುಣ್ ಹಾಗೂ ಅನೇಕ ಕಾರ್ಮಿಕರು ಭಾಗವಹಿಸಿದ್ದರು.

# ಕೊಳಚೆ ತೆರವುಗೊಳಿಸಲು ಆಗ್ರಹಿಸಿ ಪ್ರತಿಭಟನೆ

» **ಹೊಳಲ್ಕೆರೆ**

ಹೆಚ್ಚುತ್ತಿರುವ ಘನತ್ಯಾಜ್ಯ, ಎಲ್ಲೆಂದರಲ್ಲೇ ಬಿದ್ದಿರುವ ಪ್ಲಾಸ್ಟಿಕ್, ಕೊಳಚೆ ಯಿಂದ ಭರ್ತಿಯಾದ ಚರಂಡಿ, ಕತ್ತಲೆ ತುಂಭಿಕೊಂಡ ಬೀದಿಗಳು ಇವೆಲ್ಲ ಹೊಳಲ್ಕೆರೆ ಪಟ್ಟಣವನ್ನು ಹೊಲಸುಕೆರೆಯನ್ನಾಗಿಸಿದೆ. ಪುರಸಭೆ ವ್ಯಾಪ್ತಿಯಲ್ಲಿ ಹೆಚ್ಚುತ್ತಿರುವ ತ್ಯಾಜ್ಯ, ಕೊಳಚೆ, ಪ್ಲಾಸ್ಟಿಕ್ ನಿಯಂತ್ರಣಕ್ಕೆ ಪುರಸಭೆ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ ರಾಜ್ಯ ರೈತರ ಸಂಘ ಹಾಗೂ ಹಸಿರು ಸೇನೆ ಸದಸ್ಯರು ಗುರುವಾರ ಪುರಸಭೆ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು. ಪುರಸಭೆ ಸಿಬ್ಬಂದಿಗಳ ದಿವ್ಯ ನಿರ್ಲಕ್ಷ ದಿಂದ ಚರಂಡಿಗಳಲ್ಲಿ ಕೊಳಚೆ ಭರ್ತಿಯಾಗಿ ಸೊಳ್ಳೆ ಹಂದಿ ನಾಯಿಗಳ ಉಪಟಳದ ಜತೆಗೆ ಡ್ವೆಂಗು, ಮಲೇರಿಯಾ



ಸಂಕ್ರಾಮಿ ರೋಗ ಪತ್ತೆಯಾಗಿ ಜನರಲ್ಲಿ ಭೀತಿ ಸೃಷ್ಠಿಯಾಗಿದೆ. ಬಡಾವಣೆ ಚರಂಡಿಗಳಲ್ಲಿ ಕೊಳಚೆ ತೆರವುಗೊಳಿಸುವಲ್ಲಿ ಪೌರಕಾರ್ಮಿಕರು ನಿರ್ಲಕ್ಷ್ಯಿಸಿದ್ದಾರೆ. ಕಚೇರಿಗಳಿಗೆ ದೂರು ತಂದ ಜನರಿಗೆ ಸಿಬ್ಬಂದಿ ಸ್ವಂಧಿಸುವುದಿಲ್ಲ. ಸಣ್ಣಪುಟ್ಟ ಕೆಲಸಕ್ಕಾಗಿ ನೂರಾರು ಭಾರಿ ಕಚೇರಿಗೆ ಅಲೆದಾಡಬೇಕು. ಕಚೇರಿಯಲ್ಲಿ ಭ್ರಷ್ಟಚಾರ ಹೆಚ್ಚಾಗಿದೆ. ಜನಪರವಾಗಿ ಕರ್ತವ್ಯ ನಿರ್ವಹಿಸದ ಸಿಬ್ಬಂದಿಗಳನ್ನು ಅಮಾನತ್ತುಗೊಳಿಸಬೇಕು. ಪಟ್ಟಣದ ನೈರ್ಮಲ್ಯ ಕಾಪಾಡಬೇಕು. ಜನ ಜಾನುವಾರುಗಳಿಗೆ ಮಾರಕವಾಗಿರುವ ಹೊಸದುರ್ಗ ರಸ್ತೆ, ಗಣಪತಿ ದೇವಸ್ಥಾನದ ಹಿಂದಿನ ಚರಂಡಿಯಲ್ಲಿ ಶೇಖರಣೆಯಾಗಿರುವ ತ್ಯಾಜ್ಯವನ್ನು ಸ್ವಚ್ಛಗೊಳಿಸಬೇಕು. ಖಾಲಿ ನಿವೇಶದಲ್ಲಿ ಬೆಳೆದು ನಿಂತ ಮುಳ್ಳಿನ ಗೀಡ ತೆರವುಗೊಳಿಸಬೇಕು. ಸಕಾಲಕ್ಕೆ ಕುಡಿಯುವ ನೀರು ಪೂರೈಕೆ ಮಾಡಬೇಕು. ಪಟ್ಟಣದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಕತ್ತಲೆ ಆವರಿಸಿ ಆಪಘಾತಗಳು ಹೆಚ್ಚಾಗಿವೆ. ರಸ್ತೆಯ ಎರಡು ಬದಿಯಲ್ಲಿ ಪ್ರಕರ ಬೆಳಕಿನ ಬೀದಿ ದೀಪ ಆಳವಡಿಸಬೇಕೆಂದು ಆಗ್ರಹಿಸಿದರು.ರೈತರ ಸಂಘದ ಅಧ್ಯಕ್ಷ ಸಿದ್ದರಾಮಪ್ಪ, ಕಾರ್ಯದರ್ಶಿ ಅಜ್ಜಯ್, ನಿಕಟ ಪೂರ್ವ ಅಧ್ಯಕ್ಷ ರಂಗಸ್ವಾಮಿ, ಸ್ಥಾಪಕಾಧ್ಯಕ್ಷ ಲೋಕೇಶ್,ಉಪಾಧ್ಯಕ್ಷಸನಾಉಲ್ಲಾ, ಕಾಂತರಾಜ್, ಗುರುರಾಜ್ ಖಜಾಂಚಿ ಶಿವಮೂರ್ತಿ, ಬಸಪ್ಪ, ಸಣ್ಣಕ್ಕಿ ಪ್ರಭಾಕರ್, ರವಿಕುಮಾರ್ ರೈತರು ಉಪಸ್ಥಿತರಿದ್ದರು.

### ತಂದೆಯ ಅನಾರೋಗ್ಯದ ಹಿನ್ನೆಲೆಯಲ್ಲಿ ನೇಣಿಗೆ ಶರಣಾದ ಯುವಕ

» **ಚಳ್ಳಕೆರೆ**

ತಂದೆಯ ಅನಾರೋಗ್ಯ ಹಾಗೂ ಅಲ್ಪಸ್ವಲ್ಪ ಸಾಲದ ಹಿನ್ನೆಲೆಯಲ್ಲಿ ಮನನೊಂದ ಯುವಕನೊಬ್ಬ ಮನೆಯ ಬಳಿ ಇದ್ದ ಹುಣಸೆ ಮರಕ್ಕೆ ಗುರುವಾರ ಬೆಳಗ್ಗೆ ನೇಣುಹಾಕಿಕೊಂಡು ಮೃತಪಟ್ಟ ಘಟನೆ ತಾಲ್ಲೂಕಿನ ಯಲಗಟ್ಟೆಗೊಲ್ಲರಹಟ್ಟಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಶ್ರೀಧರ(30) ಎಂಬ ವ್ಯಕ್ತಿ ನೇಣಿಗೆ ಶರಣಾಗಿದ್ದು, ಕಳೆದ ಕೆಲವು ತಿಂಗಳುಗಳಿಂದ ತಂದೆ ಅನಾರೋಗ್ಯ ಪೀಡಿತನಾಗಿದ್ದು, ಎಲ್ಲೆಡೆ ಚಿಕಿತ್ಸೆ ಕೊಡಿಸಿದರೂ ಸಂಪೂರ್ಣವಾಗಿ ಗುಣಮುಖರಾಗದ ಹಿನ್ನೆಲೆಯಲ್ಲಿ ಮನನೊಂದಿದ್ದ ಈತ ತಾನು ಮಾಡಿದ್ದ ಅಲ್ಪಸ್ವಲ್ಪ ಸಾಲವನ್ನೂ ತೀರಿಸಲಾಗದ ಸ್ಥಿತಿ ಉಂಟಾದ ಹಿನ್ನೆಲೆಯಲ್ಲಿ ಮನನೊಂದು ನೇಣು ಹಾಕಿಕೊಂಡಿದ್ದಾನೆ. ಚಳ್ಳಕೆರೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಕ್ರಮಕೈಗೊಂಡಿದ್ದಾರೆ.

**ಪ್ರಮುಖ ಸುದ್ದಿ**

# ನಗರದಲ್ಲಿ ಅಸಂಘಟಿತ ಕಾರ್ಮಿಕರಿಗೆ ಕಾನೂನು ಜಾಗೃತಿ

» **ಚಿತ್ರದುರ್ಗ**

ಅನೇಕ ಸೌಲಭ್ಯಗಳಿಂದ ವಂಚಿತರಾಗಿರುವ ಅಸಂಘಟಿತ ಕಾರ್ಮಿಕರಿಗೆ ಹಕ್ಕುಗಳ ಕುರಿತು ಕಾನೂನು ಜಾಗೃತಿ ಮೂಡಿಸುವುದು ಕಾರ್ಮಿಕ ದಿನಾಚರಣೆ ಉದ್ದೇಶ ಎಂದು ಎಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ಬಿ.ಗೀತ ಹೇಳಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಕೀಲರ ಸಂಘ, ಕಾರ್ಮಿಕ ಇಲಾಖೆ ಸಹಯೋಗದೊಂದಿಗೆ ಮಾಳಪ್ಪನಹಟ್ಟಿ ರಸ್ತೆಯಲ್ಲಿರುವ ಅರವಿಂದ ಗಾರ್ಮೆಂಟ್ಸ್‌ನಲ್ಲಿ ಕಾರ್ಮಿಕ ದಿನಾಚರಣೆ ಪ್ರಯುಕ್ತ ಕಾರ್ಮಿಕರಿಗಾಗಿ ಗುರುವಾರ ಏರ್ಪಡಿಸಲಾಗಿದ್ದ ಕಾನೂನು ಅರಿವು-ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಅಮೇರಿಕಾದ ಚಿಕಾಗೋ ನಗರದಲ್ಲಿ 1881 ರಲ್ಲಿ ಮೊಟ್ಟ ಮೊದಲ ಬಾರಿಗೆ ಕಾರ್ಮಿಕರು ತಮ್ಮ ನ್ಯಾಯಯುತವಾದ ಬೇಡಿಕೆಗಳ ಈಡೇರಿಕೆಗಾಗಿ ದೊಡ್ಡ ಚಳುವಳಿ ಆರಂಭಿಸಿದಾಗ ಅನೇಕ ಸಾವು-ನೋವುಗಳು ಸಂಭವಿಸಿತು. ಅಂದಿನಿಂದ ಪ್ರತಿ ವರ್ಷ ಮೇ. 1 ರಂದು ಕಾರ್ಮಿಕ ದಿನಾಚರಣೆಯನ್ನು ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ನಿರ್ಧಿಷ್ಟವಾದ ಸಮಯವಿಲ್ಲದೆ ಹಗಲು-ರಾತ್ರಿ ಕಾರ್ಮಿಕರು



ದುಡಿಯಬೇಕಿತ್ತು. ಕೆಲಸಕ್ಕೆ ತಕ್ಕಂತೆ ವೇತನವಿರುತ್ತಿರಲಿಲ್ಲ. ಕಾಲ ಕಾಲಕ್ಕೆ ಸರಿಯಾಗಿ ಸಿಗಬೇಕಾದ ಸೌಲತ್ತುಗಳಿಂದ ಕಾರ್ಮಿಕರು ವಂಚನೆಗೊಳಗಾಗುತ್ತಿದ್ದರು. ವಿಶ್ರಾಂತಿಯಿಲ್ಲದೆ ಕಾರ್ಮಿಕರು ದುಡಿಯಬೇಕಾಗಿತ್ತು. ಹೀಗೆ ಹತ್ತು ಹಲವಾರು ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಕಾರ್ಮಿಕರು ನಡೆಸಿದ ಬೃಹತ್ ಚಳುವಳಿಯಿಂದಾಗಿ ಅನೇಕ ಕಾನೂನುಗಳನ್ನು ಜಾರಿಗೊಳಿಸಲಾಯಿತು. ನಾನಾ ರೀತಿಯ ತೊಂದರೆ ಸವಾಲುಗಳನ್ನು ಎದುರಿಸುತ್ತಿದ್ದ ಕಾರ್ಮಿಕರಿಗಾಗಿ ಯವ್ಯಾವ ಕಾನೂನುಗಳಿವೆ ಎನ್ನುವ ಅರಿವು ಮೂಡಿಸುವುದೇ ಕಾರ್ಮಿಕ ದಿನಾಚರಣೆಯ ಉದ್ದೇಶ ಎಂದರು.

ಯಾವುದೇ ಒಂದು ಸುಂದರವಾದ ಕಟ್ಟಡವನ್ನು ನೋಡಿ ಸಂತೋಷಪಡುವವರು ಕಟ್ಟಡ ನಿರ್ಮಾಣದ ಹಿಂದಿರುವ ಕಾರ್ಮಿಕರ ಪರಿಶ್ರಮವನ್ನು ಗುರುತಿಸುವುದಿಲ್ಲ.

ಎಲ್ಲಿ ಕಾರ್ಮಿಕರ ಶ್ರಮವನ್ನು ಗೌರವಿಸಲಾಗುತ್ತದೋ ಅಂತಹ ಕಡೆ ಅಭಿವೃದ್ದಿ ಕಾಣಬಹುದು. ಯಾವುದೇ ಒಂದು ಕಟ್ಟಡ ಸುಭದ್ರವಾಗಿದ್ದು, ಬಹಳ ದಿನಗಳ ಕಾಲ ಬಾಳಿಕೆ ಬರಬೇಕಾದರೆ ಅಡಿಪಾಯ ಮುಖ್ಯ. ಹಾಗಾಗಿ ಕಟ್ಟಡ ಕಾರ್ಮಿಕರ ಕೆಲಸಕ್ಕೆ ಮಹತ್ವವಿದೆ. ಕಾರ್ಮಿಕರು ಕೆಲಸದ ಜೊತೆ ಆರೋಗ್ಯದ ಕಡೆಗೂ ಹೆಚ್ಚಿನ ಗಮನ ಕೊಟ್ಟು ಸುವ್ಯವಸ್ಥಿತ ಜೀವನ ನಡೆಸುವಂತೆ ಶ್ರೀಮತಿ ಬಿ.ಗೀತ ಕರೆ ನೀಡಿದರು.

ಕಾರ್ಮಿಕ ಅಧಿಕಾರಿ ಬಿ.ಜಿ.ಚಂದ್ರಶೇಖರಯ್ಯ ಮಾತನಾಡಿ ಕಟ್ಟಡ ಕಾರ್ಮಿಕರ ಸೌಲಭ್ಯಗಳನ್ನು ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುವವರು ತೆಗೆದುಕೊಳ್ಳಬಾರದು. ಒಂದು ವೇಳೆ ಕಾರ್ಡ್ ತೆಗೆದುಕೊಂಡಿದ್ದರೆ ಇಲಾಖೆಗೆ ಹಿಂದಿರುಗಿಸಿ. ಇಲ್ಲವಾದಲ್ಲಿ ಎಫ್.ಐ.ಆರ್. ದಾಖಲಿಸಲಾಗುವುದೆಂದು ಎಚ್ಚರಿಸಿದರು.

1996 ರಲ್ಲಿ ಕಾಯಿದೆ ಬಂದ ನಂತರ ಕಾರ್ಮಿಕರಿಗೆ ಅನೇಕ ರೀತಿಯ ಸೌಲತ್ತುಗಳನ್ನು ನೀಡಲಾಗುತ್ತಿದೆ. ಕೋವಿಡ್ ಸಂದರ್ಭದಲ್ಲಿ ಕಾರ್ಮಿರಿಗೆ ಫುಡ್ ಕಿಟ್ ಸೇರಿದಂತೆ ನಾನಾ ರೀತಿಯ ಸಲಕರಣೆಗಳನ್ನು ನೀಡಲಾಯಿತು. ಕಾರ್ಮಿಕರ ಮಾಹಿತಿ ಪಡೆದುಕೊಳ್ಳುವುದಕ್ಕಾಗಿ ಸರ್ಕಾರ ಈ ಶ್ರಮ್ ಯೋಜನೆಯನ್ನು ತಂದಾಗ 38 ಲಕ್ಷ ಅಸಂಘಟಿತ ಕಾರ್ಮಿಕರು ನೊಂದಾಯಿಸಿಕೊಂಡಿದ್ದಾರೆ. ಎರಡು ಲಕ್ಷ ರೂ.ಗಳ ವಿಮೆ ಸೌಲಭ್ಯವಿದೆ. ನೀವು ಕೆಲಸ ಮಾಡುವ ಜಾಗದಲ್ಲಿ ಏನಾದರೂ ಲೈಂಗಿಕ ಕಿರುಕುಳವಾದರೆ ಸಂಬಂಧಪಟ್ಟವರಲ್ಲಿ ಶೇರ್ ಮಾಡಿಕೊಂಡು ರಕ್ಷಣೆ ಪಡೆದುಕೊಳ್ಳಿ. ಕಾರ್ಮಿಕ ಇಲಾಖೆಯಿಂದ ಅನೇಕ ಸೌಲಭ್ಯಗಳಿವೆ. ಕಾಯಿದೆ ಹೇಳಿದ್ದೆಲ್ಲವನ್ನು ಕೇಳಿ. ಆದರೆ ಯಾವುದು ಸರಿ ತಪ್ಪು ಎನ್ನುವ ನಿರ್ಧಾರ ತೆಗೆದುಕೊಳ್ಳುವುದು ನಿಮ್ಮ ಕೈಯಲ್ಲಿದೆ ಎಂದು ತಿಳಿಸಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ವಿಜಯ್ ಕಾರ್ಮಿಕರ ಹಕ್ಕುಗಳ ಕುರಿತು ಮಾತನಾಡಿದರು.

ವಕೀಲರ ಸಂಘದ ಉಪಾಧ್ಯಕ್ಷ ಬಿ.ಎಂ. ಅನಿಲ್‌ಕುಮಾರ್, ಪ್ರಧಾನ ಕಾರ್ಯದರ್ಶಿ ಆರ್.ಗಂಗಾಧರ್, ಕಾರ್ಮಿಕ ನಿರೀಕ್ಷಕ ಡಿ.ರಾಜಣ್ಣ, ಅರವಿಂದ ಗಾರ್ಮೆಂಟ್ಸ್‌ನ ಚೀಫ್‌ಮ್ಯಾನೇಜರ್ ಆರ್.ಮುತ್ತುಕುಮಾರ್ ವೇದಿಕೆಯಲ್ಲಿದ್ದರು.






# ಆದರ್ಶಪ್ರಾಯ ಛತ್ರಪತಿ ಶಿವಾಜಿ ಮಹಾರಾಜ್



ಶಿವಾಜಿಯು ಅತ್ಯಂತ ಧೈರ್ಯಶಾಲಿ ಸಾಮ್ರಾಟನಾಗಿದ್ದು ಭಾರತದಾದ್ಯಂತ ಮರಾಠ ಸಾಮ್ರಾಜ್ಯವನ್ನು ಸ್ಥಾಪಿಸಿ, ವಿಸ್ತರಿಸಿದ ಕೀರ್ತಿ ಇವನದ್ದು ಅದಕ್ಕೆ ಮುಖ್ಯ ಕಾರಣ ಛತ್ರಪತಿ ಶಿವಾಜಿಯ ನ್ಯಾಯಯುತ ಆಡಳಿತವಾಗಿದೆ. ಶಿವಾಜಿಯು 19 ನೇ ಫೆಬ್ರವರಿ, 1630ರಲ್ಲಿ ಪೂನಾ ಬಳಿಯ ಶಿವನೇರಿ ದುರ್ಗದಲ್ಲಿ ಜನಿಸಿದ. ಶಹಾಜಿರಾಜೆ ಭೋಂಸ್ಲೆ ಮತ್ತು ಜೀಜಾಬಾಯಿ ಈತನ ತಂದೆ ತಾಯಿಗಳು, ಶಿವಾಜಿಯ ಮೇಲೆ ಹೆಚ್ಚು ಪ್ರಭಾವ ಬೀರಿದ ವ್ಯಕ್ತಿಗಳೆಂದರೆ ಅವನ ತಾಯಿ ಜೀಜಾಬಾಯಿ ಮತ್ತು ಗುರುಗಳಾದ ದಾದಾಜಿ ಕೊಂಡ ದೇವ ಮತ್ತು ರಾಮದಾಸ ಸಮರ್ಥರು, ದೈವ ಭಕ್ತಳಾದ ಜೀಜಾಬಾಯಿ ಶಿವಾಜಿಗೆ ಚಿಕ್ಕ ವಯಸ್ಸಿನಲ್ಲಿ ಚರಿತ್ರೆಯ ವೀರಪುರುಷರ ಕಥೆಗಳನ್ನು ಪುರಾಣಗಳನ್ನು ಹೇಳುತ್ತಾ ಅವನಲ್ಲಿ ಉದಾತ್ತ ಆದರ್ಶಗಳನ್ನು ಬಿತ್ತಿದಳು. ರಾಮದಾಸರು ಶಿವಾಜಿಯ ಆಧ್ಯಾತ್ಮಿಕ ಗುರುಗಳಾಗಿದ್ದು ಅವರ ಕೃತಿಯಾದ ದಾಸಬೋಧದ ಮೂಲಕ ಶಿವಾಜಿಗೆ ಧರ್ಮ ರಕ್ಷಣೆಯ ಮಂತ್ರಗಳನ್ನು ಬೋಧಿಸಿದರು. ಗುರುಗಳಾದ ದಾದಾಜಿ ಕೊಂಡ ದೇವ ಶಿವಾಜಿಗೆ ಕುದುರೆ ಸವಾರಿ, ಕತ್ತಿವರಸೇ ಶಸ್ತ್ರಾಭ್ಯಾಸ ವಿದ್ಯೆ ಕಲಿಸಿಕೊಟ್ಟರು. ಶಿವಾಜಿಯ ಕಿರೀಟಧಾರಣೆ 1674 ರಲ್ಲಿ ರಾಯಗಡದಲ್ಲಿ ನಡೆಯಿತು. ಶಿವಾಜಿ ಪಟ್ಟಾಭಿಷೇಕನಾಗಿ ಛತ್ರಪತಿ ಎಂಬ ಬಿರುದು ಗಳಿಸಿದನು. ಛತ್ರಪತಿ ಎಂದರೆ ರಾಜರ ರಾಜ ಎಂದರ್ಥ. ಅವನ ಕಿರೀಟ ಧಾರಣೆಯ ಸರ್ವ ಸ್ವತಂತ್ರ ಮರಾಠ ಸಾಮ್ರಾಜ್ಯ ಉದಯದ ಸಂಕೇತವಾಗಿತ್ತು, ಸ್ವರಾಜ್ಯದ ಸುಳಿವು ನೀಡಿದ ಈ ಘಟನೆ ಮರಾಠ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗಿದೆ.

## ಶಿವಾಜಿಯ ಆಡಳಿತ

ಶಿವಾಜಿಯು ಶಸ್ತ್ರಾಸ್ತ್ರಗಳಲ್ಲಿ ಅಪ್ರತಿಮ ವೀರನಾಗಿದ್ದನು. ಅವನು ತನ್ನ 19ನೇ ವಯಸ್ಸಿನಲ್ಲೆ ತೋರಣ ದುರ್ಗವನ್ನು ವಶಪಡಿಸಿಕೊಂಡು ನಂತರ ರಾಯಗಡ, ಸಿಂಹಗಡ ಮತ್ತು ಪುರಂದರಗಡಗಳನ್ನು ವಶಪಡಿಸಿಕೊಂಡನು, ಈ ಎಲ್ಲಾ ಪ್ರದೇಶಗಳು ಬಿಜಾಪುರ ಸುಲ್ತಾನರ ಸಾಮ್ರಾಜ್ಯದ ವ್ಯಾಪ್ತಿಯಲ್ಲಿದ್ದವು. ಶಿವಾಜಿಯು ಕೊಂಕಣ ಪ್ರದೇಶದ ಕಲ್ಯಾಣ ಜಾವಳಿ ಕೋಟೆಯ ಪ್ರದೇಶಗಳನ್ನು ವಶಪಡಿಸಿಕೊಂಡನು. ಶಿವಾಜಿಯ ದಾಳಿಗಳು ಬಿಜಾಪುರ ಸುಲ್ತಾನನಿಗೆ ಕೋಪ ತರಿಸಿತು ಶಿವಾಜಿಯನ್ನು ನಿಗ್ರಹಿಸಲು, ತನ್ನ ದಂಡ ನಾಯಕನಾದ ಅಫ್ಜಲ್ ಖಾನನ ನೇತೃತ್ವದಲ್ಲಿ ಸೈನ್ಯವನ್ನು ಕಳಿಹಿಸಿದನು, ಪ್ರತಾಪಗಡದ ಬಳಿಯವಾಯಿ ಎಂಬಲ್ಲಿ ಶಿವಾಜಿಯು ಅಫ್ಜಲ್ ಖಾನನನ್ನು ಮಾತುಕತೆಗೆ ಕರೆದು ಉಪಾಯದಿಂದ ಕೊಂದನು. ಶಿವಾಜಿಯ ಆಡಳಿತದಲ್ಲಿ ಸಹಾಯ ಮಾಡಲು ಅಷ್ಟ ಪ್ರಧಾನರೆಂಬ ಎಂಟು ಜನ ಮಂತ್ರಿಗಳು, ಒಂದು ಮಂಡಳಿ ಇತ್ತು. ಮುಖ್ಯಮಂತ್ರಿಯನ್ನು ಪೇಶ್ವೆ ಎಂದು ಕರೆಯಲಾಗುತ್ತಿತ್ತು. ಭೂಕಂದಾಯ ರಾಜ್ಯದ ಮುಖ್ಯ ಆದಾಯವಾಗಿತ್ತು. ರೈತರೇ ನೇರವಾಗಿ ತೆರಿಗೆಯನ್ನು ಸರ್ಕಾರಕ್ಕೆ ಸಲ್ಲಿಸುವ ಪದ್ಧತಿ ರೂಢಿಯಲ್ಲಿತ್ತು. ಅಧಿಕಾರಿಗಳಿಗೆ ವೇತನವನ್ನು ಹಣದ ರೂಪದಲ್ಲಿ ನೀಡಲಾಗಿತ್ತು, ಜಾಗೀರ್ ನೀಡುತ್ತಿರಲಿಲ್ಲ. ಉದ್ಯೋಗದ ನೇಮಕಾತಿಯಲ್ಲಿ ಅರ್ಹತೆಯ ಮಾನದಂಡವಾಗಿತ್ತು. ಅರ್ಹತೆಯು ವ್ಯಕ್ತಿತ್ವ ಅಪ್ರತಿಮ ವೀರನಾದ ಛತ್ರಪತಿ ಶಿವಾಜಿಯು ಪ್ರಜಾಹಿತರಕ್ಷಕ, ರಾಷ್ಟ್ರ ಪ್ರೇಮಿ ನ್ಯಾಯವಂತ, ಸುಸಜ್ಜಿತ ನೌಕಾದಳ ಮತ್ತು ಕರ್ತವ್ಯ ದಕ್ಷ, ಧರ್ಮ ಶ್ರದ್ಧೆ ಭಾಷಾ ಶುದ್ಧಿಯನ್ನು ಪುರಸ್ಕರಿಸುವ ರಾಜ್ಯಕ್ಕಾಗಿ ಶ್ರಮಿಸಿದಂತಹ ಮಹಾನ್ ಪುರುಷನಾಗಿದ್ದಾನೆ.

ಶಿವಾಜಿ ಆಡಳಿತದ ಕಾಲ ಘಟ್ಟದಲ್ಲಿ ಮುಸ್ಲಿಂ ರಾಜರೆಲ್ಲ



ಹಿಂದುಗಳ ಬಗೆಗೆ ಹಿಂದೂ ಧರ್ಮದ ಬಗೆಗೆ ಅಸಹಿಷ್ಣುಗಳಾಗಿರುವುದು ಕಂಡುಬರುವುದಿಲ್ಲ. ಹಲವು ಮುಸ್ಲಿಂ ರಾಜರು ಹಿಂದೂ ಧರ್ಮ ಸಹಿಷ್ಣುಗಳಾಗಿದ್ದರು ಎನ್ನುವುದಕ್ಕೆ ಚರಿತ್ರೆಯಲ್ಲಿ ಪುರಾವೆಗಳಿವೆ, ವಿಶೇಷವಾಗಿ ಮಹಾರಾಷ್ಟ್ರದಲ್ಲಿ ಮುಸ್ಲಿಂ ಅರಸರು ಸಹಿಷ್ಣುವೃತ್ತಿಯ ಮತ್ತು ಹಿಂದುಗಳ ಜೊತೆಗಿದ್ದ ರಾಜಕೀಯ ಮತ್ತು ಕೌಟುಂಬಿಕ ಸಂಬಂಧಗಳ ಹಲವು ಪುರಾವೆಗಳು ಲಭ್ಯ ಇವೆ, ಎಲ್ಲಿಯವರೆಗೆ ತನ್ನ ರಾಜ್ಯಕ್ಕೆ ಹಿಂದುಗಳಿಂದ ಗಂಡಾಂತರ ನಿರ್ಮಾಣವಾಗುತ್ತಿರಲಿಲ್ಲವೋ, ಎಲ್ಲಿಯವರೆಗೆ ಹಿಂದೂ ಸರದಾರರು ಅವರ ರಾಜ್ಯಗಳಿಗೆ ಸಹಾಯ ಮಾಡುತ್ತಾರೋ, ಅಲ್ಲಿಯವರೆಗೆ, ಮುಸ್ಲಿಂ ರಾಜರು ಹಿಂದುಗಳ ಮೇಲೆ ಸಹಿಷ್ಣತೆ ತೋರಿಸಿದರು. ರಾಜ್ಯಕ್ಕೆ ಗಂಡಾಂತರ ಬಂತೆಂದರೆ ಅವರು ಮುಸ್ಲಿಮರೇ ಆಗಿರಲಿ, ಹಿಂದುಗಳೇ ಆಗಿರಲಿ, ಅಸಹಿಷ್ಣುಗಳಾಗುತ್ತಾರೆ. ಹಿಂದೂ ಅಥವಾ ಮುಸ್ಲಿಂ ಇದು ಮಹತ್ವದ್ದಾಗಿರಲಿಲ್ಲ, ರಾಜ್ಯ ಮಹತ್ವದ್ದಾಗಿತ್ತು. ದಿಲ್ಲಿ ಸುಲ್ತಾನರೆಲ್ಲ ಕಟ್ಟಾ ಮುಸ್ಲಿಂರಾಗಿದ್ದರು ಎನ್ನುವುದು ನಿಜವಲ್ಲ. ಆ ಕಾಲದಲ್ಲಿ ಸಾಂಸ್ಕೃತಿಕ ಏಕತೆ ಸಾಕಷ್ಟು ಪ್ರಮಾಣದಲ್ಲಿ ನಿರ್ಮಾಣವಾಗಿತ್ತು. ಸೋದರಮಲ್ಲ ಎಂಬ ಹಿಂದೂ ಪ್ರಧಾನಿಯು, ಮುಸ್ಲಿಂ ರಾಜರಿಗಾಗಿ ತನ್ನ ಬುದ್ಧಿಯನ್ನು ಬಳಸುತ್ತಿದ್ದ. ಶ್ರೇಷ್ಠ ಬ್ರಾಹ್ಮಣ ಕುಲದ ಜಗನ್ನಾಥ ಪಂಡಿತನು ಮುಸ್ಲೀಂ ಅರಸರ ವಡ್ಡೋಲಾಗದಲ್ಲಿದ್ದು ಸಂಸ್ಕೃತದಲ್ಲಿ ಕಾವ್ಯ ರಚಿಸುವ ಕವಿಯಾಗಿದ್ದ ಇದರ ಅರ್ಥ ಇಷ್ಟೇ, ಮುಸ್ಲಿಂ ದೊರೆಗಳೆಲ್ಲರೂ ಹಿಂದೂ ಧರ್ಮ ದ್ವೇಷಿಗಳಾಗಿರಲಿಲ್ಲ. ಹಲವು ಮುಸ್ಲಿಂನ ಸರದಾರರು, ವತನದಾರರು ಮತ್ತು ಸೇವಕರು ಇದ್ದರು ಅವರೆಲ್ಲ ಉನ್ನತ ಹುದ್ದೆಯಲ್ಲಿದ್ದರು, ಶಿವಾಜಿಯ ತೋಫು ಕಾಣೆಯಲ್ಲಿ ಪ್ರಮುಖವಾಗಿ ಒಬ್ಬ ಮುಸಲ್ಮಾನ ವ್ಯಕ್ತಿಯಿದ್ದ ಅವನ ಹೆಸರು ಇಬ್ರಾಹಿಂ ಖಾನ್ ಇದು ಸೈನ್ಯದ ಒಂದು ಪ್ರಮುಖ ಅಂಗ ಎಲ್ಲಕ್ಕಿಂತ ಮಹತ್ವದ್ದು. ತೋಫು ಆ ಕಾಲದಲ್ಲಿ ಎಲ್ಲಕ್ಕಿಂತ ಬಲವಾದ ಶಸ್ತ್ರ ಕೋಟೆ ಯುದ್ಧದಲ್ಲಿ ಅದರ ಮಹತ್ವ ಅತ್ಯಂತ ಮುಖ್ಯವಾದದು. ಇಂತಹ ಮಹತ್ವದ ತೋಫು ಕಾಣೆಯ ಪ್ರಮುಖ ಒಬ್ಬ ಮುಸಲ್ಮಾನ ವ್ಯಕ್ತಿಯಾಗಿದ್ದ.

ಶಿವಾಜಿಯ ಆಡಳಿತದ ರಾಜ್ಯದಲ್ಲಿ ಸರದಾರರಾಗಲಿ, ಸೈನ್ಯವಾಗಲಿ, ಕೇವಲ ಹಿಂದೂ ಧರ್ಮವಷ್ಟೇ ಆಗಿರಲಿಲ್ಲ ಅದರಲ್ಲಿ ಮುಸ್ಲಿಂ ಧರ್ಮದವರ ಸಮೂಹವು ಇತ್ತು ಎನ್ನುವುದು ಸತ್ಯ ಸಂಗತಿ. ಶಿವಾಜಿಯು ಮುಸ್ಲಿಂ ಧರ್ಮವನ್ನು ತೊಡೆದು ಹಾಕುವ ಪ್ರಯತ್ನ ಮಾಡಿದ್ದರೆ ಈ ಮುಸಲ್ಮಾನರು ಶಿವಾಜಿಯ ಆಶ್ರಯದಲ್ಲಿ ಇರುತ್ತಿರಲಿಲ್ಲ. ಶಿವಾಜಿ ಮುಸ್ಲಿಂ ರಾಜರುಗಳ ದೂರ ರಾಜ್ಯ ಕಾರಭಾರವನ್ನು ಕಿತ್ತು ಹಾಕಲು ಪ್ರಯತ್ನಿಸಿದ ಪ್ರಜೆಗಳ ಕಾಳಜಿಯನ್ನು ವಹಿಸುವ ಸರ್ಕಾರ ತರಲು ಯತ್ನಿಸಿದ, ಆದ್ದರಿಂದ ಮುಸಲ್ಮಾನರು ಸಹ ಈ ಕಾರ್ಯದಲ್ಲಿ ಸಹಭಾಗಿಗಳಾಗಿದ್ದರು. ಧರ್ಮದ ಪ್ರಶ್ನೆ ಮುಖ್ಯವಾಗಿರಲಿಲ್ಲ ರಾಜ್ಯದ ಪ್ರಶ್ನೆ ಮುಖ್ಯವಾಗಿತ್ತು. ಧರ್ಮ ಮುಖ್ಯವಾಗಿರಲಿಲ್ಲ, ರಾಜ್ಯ ಮುಖ್ಯವಾಗಿತ್ತು. ಧರ್ಮ ನಿಷ್ಠೆಗಿಂತಲೂ ರಾಜ್ಯನಿಷ್ಠೆ, ಸ್ವಾಮಿ ನಿಷ್ಠೆ, ಮುಖ್ಯವಾಗಿತ್ತು. ಶಿವಾಜಿಯ ಆಶ್ರಯದಲ್ಲಿ ಮುಸಲ್ಮಾನ ಸರದಾರರು, ಸೈನಿಕರು, ಇದ್ದಂತೆ ಮುಸಲ್ಮಾನ ರಾಜರ ಆಶ್ರಯದಲ್ಲಿ ಅಗಣಿತ ಮರಾಠ ಮತ್ತು ಹಿಂದೂ ಸರದಾರರಿದ್ದರು. ಶಿವಾಜಿಯ ತಂದೆಯೇ ಬಿಜಾಪುರ ಆದಿಲ್‌ಶಾಹಿಯ ಆಶ್ರಯದಲ್ಲಿ ಅತಿ ದೊಡ್ಡ ಸರದಾರನಾಗಿದ್ದ. ಶಿವಾಜಿಯ ಮಾವ ಲೊಕುಜಿ ಜಾದವನು ನಿಜಾಮಶಾಹಿಯ ಮಹಾರಾಷ್ಟ್ರದ ಒಬ್ಬ ಕುದುರೆ ಸವಾರರ ಅಧಿಕಾರಿಯಾಗಿದ್ದ. ಜಾವಳಿಯ ಮೊರೇ ಪಲ್ಲಟನಾದ ನಿಂಬಾಳ್ಕರ ಸಾವಂತವಾಡಿಯ, ಕೇಮ ಸಾವಂತ, ಶೃಂಗಾರ ಪುರದ ಸೂರ್ಯ, ಇವರೆಲ್ಲ ಆದಿಲ್‌ಶಾಹಿಯ ಕುದುರೆ ಸವಾರರ ಅಧಿಕಾರಿಗಳಾಗಿದ್ದರು.

ಧರ್ಮ ನಿಷ್ಠೆಗಿಂತ ಸ್ವಾಮಿನಿಷ್ಠೆಗೆ ಹೆಚ್ಚು ಮಾನ್ಯತೆ ಇತ್ತು. ಪ್ರಾಚೀನ ಮತ್ತು ಮಧ್ಯಯುಗದ ಭಾರತದಲ್ಲಿ ಧರ್ಮದಿಂದಾಗಿ, ಧರ್ಮಕ್ಕಾಗಿ, ಯುದ್ಧ ನಡೆಯುತ್ತಿರಲಿಲ್ಲ ಕಾಳಗದ ಮುಖ್ಯ ಕಾರಣವೇ ಎಂದರೆ ರಾಜ್ಯ ಗಳಿಸುವುದು ರಾಜ್ಯ ಕಸಿದುಕೊಳ್ಳುವುದು ಮತ್ತು ಅದನ್ನು ಉಳಿಸಿಕೊಳ್ಳುವುದು ಆಗಿತ್ತು. ಇದರ ಬಳಕೆಗೆ ಎಷ್ಟು ಬೇಕು ಅಷ್ಟರಮಟ್ಟಿಗೆ ಧರ್ಮದ ಬಳಕೆಯಾಗುತ್ತಿತ್ತು.

## ಕೃಷಿ ಸುಧಾರಣೆ

ಶಿವಾಜಿಯು ಕಂದಾಯ ಕುರಿತು ಸುಬೇದಾರರಿಗೆ ಸೂಚನೆ ನೀಡುತ್ತಿದ್ದನು, "ಪ್ರತಿ ಊರಿನ ರೈತರನ್ನು ಎಷ್ಟು ಸಾಧ್ಯವೋ ಅಷ್ಟು ಅರ್ಥಮಾಡಿಕೊಳ್ಳಬೇಕು, ಅವರಿಂದ ಎರಡು-ಮೂರು ಪಟ್ಟು ಸಾಲ ವಸೂಲಿ ಮಾಡದೆ, ಅಸಲು ಸಾಲವನ್ನೇ ಕ್ರಮೇಣ ಹಂತ-ಹಂತವಾಗಿ ವಸೂಲಿ ಮಾಡಬೇಕು. ಅವನಲ್ಲಿ ಕೃಷಿ ಹುರುಪು-ಉತ್ಸಾಹವಿರುವಂತೆ ನೋಡಿಕೊಳ್ಳಬೇಕು. ಹಿಂದಿನ ಬಾಕಿಯನ್ನು ಅವಸರದಿಂದ ವಸೂಲಿ ಮಾಡುವ ಅಗತ್ಯವಿಲ್ಲ. ಮಡ್ಡಿ ನೆಲವನ್ನು ಒತ್ತಿದರು ಅಸಲು ಬಾಕಿ ಇದ್ದ ರೈತರ ಸಾಲವನ್ನು ಮಾಫಿ ಮಾಡಬೇಕು." ಕೃಷಿ ಜನತೆಯ ನಿಜವಾದ ನಾಯಕನ ಬೆಳೆಯಲ್ಲಿ ದೇಶದ ಶ್ರೇಷ್ಠ ವ್ಯಕ್ತಿಗಳನ್ನು ತನ್ನಡೆಗೆ ಆಕರ್ಷಿಸುವ ಯಾವ ಶಕ್ತಿ ಬೇಕಾಗುತ್ತದೆ ಅದು ಶಿವಾಜಿ ಹತ್ತಿರ ಅತಿ ದೊಡ್ಡ ಪ್ರಮಾಣದಲ್ಲಿತ್ತು. ವರ್ಗ, ಜಾತಿ, ಪಂಥ ಮತ್ತು ವರ್ಣ ಇದನ್ನೆಲ್ಲ ಮರೆತು ಸಮಾಜದ ಶ್ರೇಷ್ಠ ಜನರೆಲ್ಲ ಶಿವಾಜಿಯ ಸುತ್ತಲೂ ನಡೆಯುತ್ತಿದ್ದರು. ಏಕೆಂದರೆ ಸಮಾಜದ ಇಂತಹ ಆಕಾಂಕ್ಷೆಗಳ ಉತ್ಕಟ ಸ್ವರೂಪದೊಳಗೆ ಶಿವಾಜಿ ಪ್ರತಿನಿಧಿತ್ವ ಮಾಡುತ್ತಿದ್ದ. ಶಿವಾಜಿ ಹಳೆ ಜಾಗೀರ್‌ನ್ನು ಮತ್ತು ಹಳೆಯ ಕರ ಪದ್ಧತಿಯನ್ನು ರದ್ದುಗೊಳಿಸಿದ. ಭೂ ದಾಸರ ಮೇಲಿನ ನಿರಂತರ ಅಧಿಕಾರವನ್ನು ನಷ್ಟ ಗೊಳಿಸಿದ. ಭೂಕಂದಾಯದ ಟೀಕೆ ದಾರಿಗೆ ಈ ಪದ್ಧತಿಯನ್ನು ನಿಲ್ಲಿಸಿದ. ಪ್ರತಿಯೊಬ್ಬನಿಗೆ ಊರಲ್ಲಿ ಹೊಲ-ಕೊಡಲಿಗೆ ಸ್ಥಿರತೆ, ಪ್ರತ್ಯಕ್ಷವಾಗಿ ಬೆಳೆದ ಬೆಳೆಯ ಮೇಲೆ ಕರ ಆಕರಣೆ ರೈತರ ಉತ್ಪನ್ನದ ಮೇಲೆ ಜಹೀರುದಾರರ ಹಕ್ಕು ಇಲ್ಲ. ಎಂದು ಆದೇಶ ಮಾಡಿದ. ಇದು ಶಿವಾಜಿಯ ಕೃಷಿ ಸುಧಾರಣೆಯಾಗಿತ್ತು

## ಶಿವಾಜಿಯ ಧಾರ್ಮಿಕ ಸಹಿಷ್ಣತೆ

ಶಿವಾಜಿಯು ಧಾರ್ಮಿಕ ಸಹಿಷ್ಣುಹಿಯಾಗಿದ್ದನು. ಆಡಳಿತದ ಅವಧಿಯಲ್ಲಿ ಹಿಂದೂಗಳು ಅಷ್ಟೆ ಅಲ್ಲ, ಮುಸ್ಲಿಂರು ಕೂಡ ಸಂಪೂರ್ಣ ಧಾರ್ಮಿಕ ಸ್ವಾತಂತ್ರ್ಯವನ್ನು ಹೊಂದಿದ್ದರು. ಶಿವಾಜಿ ಹಿಂದುಗಳಿಗೆ ಹೇಗೆ ದೇವಾಲಯಗಳನ್ನು ನಿರ್ಮಿಸಲು ಸಹಕಾರವನ್ನು ನೀಡುತ್ತಿದ್ದರೋ, ಅಷ್ಟೇ ಸಹಕಾರವನ್ನು ಮುಸ್ಲಿಮರಿಗೆ ಮಸೀದಿಯನ್ನು ನಿರ್ಮಿಸಲು ನೀಡುತ್ತಿದ್ದನು. ಅವರ ಸಾಮ್ರಾಜ್ಯದಲ್ಲಿ ಹಿಂದು ಪಂಡಿತರಿಗಿದ್ದ ಗೌರವವನ್ನೇ ಮುಸ್ಲಿಂ ಸಂತರಿಗೆ ಹಾಗೂ ಫಕೀರರಿಗೂ ನೀಡಲಾಗುತ್ತಿತ್ತು. ಶಿವಾಜಿಯ ಸೈನ್ಯದಲ್ಲಿ ಹಿಂದೂ ಸೈನಿಕರಂತೆ ಮುಸ್ಲಿಂ ಸೈನಿಕರು ಇದ್ದರು. ಶಿವಾಜಿಯ ಆಡಳಿತದಲ್ಲಿ ಸಾಂಪ್ರದಾಯಕ ಮೌಲ್ಯಗಳಿಗೆ ಹಾಗೂ ಶಿಕ್ಷಣಕ್ಕೆ ಪ್ರಾಮುಖ್ಯತೆಯನ್ನು ನೀಡಲಾಗುತ್ತಿತ್ತು.

ಶಿವಾಜಿ ರೈತರಿಗೆ, ದಲಿತರಿಗೆ ಮತ್ತು ಮುಸಲ್ಮಾನರಿಗೆ ಸಮಾನತೆಯಿಂದ ಆಶ್ರಯ ಮತ್ತು ಅವಕಾಶಗಳನ್ನು ನೀಡಿರುವುದನ್ನು ಮರೆಯಲಾಗದು. ಯಾವಾಗಲೂ ಶ್ರೇಷ್ಠ ಪುರುಷರ ಚರಿತ್ರೆಯನ್ನು ಅವರ ವಿಚಾರಗಳನ್ನು ಅವರ ಪ್ರೇರಣೆಗಳನ್ನು ನಾವು ಪರಿಪೂರ್ಣವಾಗಿ ಅರ್ಥಮಾಡಿಕೊಳ್ಳಬೇಕಾಗಿದೆ. ಈ ದೃಷ್ಟಿಯಿಂದ ಶಿವಾಜಿಯನ್ನು ಒಬ್ಬ ಆದರ್ಶ, ಜಾತ್ಯಾತೀತತೆಯಿಂದ ಆಡಳಿತ ಮಾಡಿದ ಒಬ್ಬ ಶ್ರೇಷ್ಟ ಮಹಾನ್ ಚಕ್ರವರ್ತಿ ಛತ್ರಪತಿ ಶಿವಾಜಿ ಮಹಾರಾಜ ಎಂದು ಅರಿತುಕೊಳ್ಳಬೇಕು.

» ಡಾ. ಜಗನ್ನಾಥ ಕೆ. ಡಾಂಗೆ, ಪ್ರಾಧ್ಯಾಪಕರು ಶಿಕ್ಷಣ ಅಧ್ಯಯನ ವಿಭಾಗ ಕುವೆಂಪು ವಿಶ್ವವಿದ್ಯಾಲಯ,

» ಡಾ. ಬಸವರಾಜ್.ಎಸ್, ಸಹಾಯಕ ಪ್ರಾಧ್ಯಾಪಕರು ವಿವೇಕಾನಂದ ಶಿಕ್ಷಣ ಮಹಾವಿದ್ಯಾಲಯ ಅರಸಿಕೆರೆ

» ಶ್ರೀ ಸಂದೀಪ.ಎಲ್ ಸಂಶೋಧನಾರ್ಥಿ. ಶಿಕ್ಷಣ ಅಧ್ಯಯನ ವಿಭಾಗಕುವೆಂಪು ವಿಶ್ವವಿದ್ಯಾಲಯ

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T